ಸಂಪುಟ : 11 ಸಂಚಿಕೆ: 48 ಪುಟ : 4+2 ಬೆಲೆ: 3.00 ರವಿವಾರ ಮಾರ್ಚ್ 22 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ

Volume : 11 Issue : 48 Pages : 4+2 Price : 3.00 Sunday March 22 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




### ಈದ್ಗಾಗಳಲ್ಲಿ ಸಾಮೂಹಿಕ ನಮಾಜ್, ಪರಸ್ಪರ ಶುಭಾಶಯ ವಿನಿಮಯ

# ರಮಜಾನ್ ಹಬ್ಬ: ಗದಗ ಜಿಲ್ಲೆಯಲ್ಲಿ ಭಾವೈಕ್ಯತೆಯ ಸಂಭ್ರಮ!

### ಶಿರಹಟ್ಟಿಯಲ್ಲಿ ಶ್ರದ್ಧಾಭಕ್ತಿಯಿಂದ ಈದ್ ಉಲ್ ಫಿತ್ರ್ ಆಚರಣೆ

## ಪೈಗಂಬರರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ತ್ಯಾಗ, ದಾನ ಮತ್ತು ಸಹೋದರತ್ವದ ಸಂಕೇತವಾದ ರಮಜಾನ್ ಮಾಸದ ಪ್ರಯುಕ್ತ ಕಳೆದ ಒಂದು ತಿಂಗಳ ಉಪವಾಸವನ್ನು ಮುಸ್ಲಿಂ ಬಾಂಧವರು ಶುಕ್ರವಾರ ಚಂದ್ರದರ್ಶನದೊಂದಿಗೆ ಪೂರ್ಣಗೊಳಿಸಿ, ಶನಿವಾರ ಪಟ್ಟಣ ಸೇರಿದಂತೆ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಈದ್ ಉಲ್ ಫಿತ್ರ್ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಿದರು.

ಶಿರಹಟ್ಟಿ ಪಟ್ಟಣದಲ್ಲಿ ಬೆಳಿಗ್ಗೆ 9 ಗಂಟೆಗೆ ಜುಮ್ಮಾ ಮಸೀದಿಯಿಂದ ಅಲ್ಲಾಹನ ನಾಮಸ್ಮರಣೆಯೊಂದಿಗೆ ಮೆರವಣಿಗೆ ಆರಂಭಗೊಂಡಿತು. ಶ್ವೇತ ವಸ್ತ್ರಧಾರಿಗಳಾಗಿ ಮುಸ್ಲಿಮರು ಪಟ್ಟಣದ ಹೊರವಲಯದ ಸೊರಟೂರ ರಸ್ತೆ ಬಳಿ ನೂತನವಾಗಿ ನಿರ್ಮಿತ ಈದ್ಗಾ ಮೈದಾನದಲ್ಲಿ ಸೇರಿ ಸಾಮೂಹಿಕ ನಮಾಜ್ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮೌಲಾನಾ ಮಜಹರಖಾನ್ ಪಠಾಣ ಅವರು, ಇಸ್ಲಾಂ ಧರ್ಮದ ತತ್ವಗಳು, ಸಹೋದರತ್ವದ ಮೌಲ್ಯಗಳು ಹಾಗೂ ಪ್ರವಾದಿ ಮಹಮ್ಮದ್ ಪೈಗಂಬರರು ನೀಡಿದ ಸಂದೇಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ನಂತರ ಮುಸ್ಲಿಂ ಬಾಂಧವರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಡಿ. ಮಾಗಡಿ, ಇಸಾಕ್ ಆದ್ರಳ್ಳಿ, ಅಶ್ರತ್ ಅಲಿ ಢಾಲಾಯತ್, ಬುಡನಶ್ಯಾ ಮಕಾನದಾರ, ಸಿ.ಕೆ. ಮುಳಗುಂದ, ಅಲಹಾಜ್ ಎ.ಜೆ. ಕುಬಸದ, ಜಿ.ಬಿ. ಹೆಸರೂರ, ಎ.ಎಚ್. ಖಾಜಿ, ಅಜಮತ್ ಅಲಿ ಮಕಾನದಾರ, ಸಿರಾಜ್ ಮಕಾನದಾರ, ರಿಯಾಜ್ ತಹಶೀಲ್ದಾರ, ಸಲೀಂ ಮಕಾನದಾರ, ಜಹೀರ ಅತ್ತಾರ, ಹಸನ್ ತಹಶೀಲ್ದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ರಂಜಾನ್ ಹಬ್ಬ : ಸಚಿವ ಎಚ್.ಕೆ. ಪಾಟೀಲರಿಂದ ಶುಭಾಶಯ



**■ವಿಜಯಸಾಕ್ಷಿ ಸುದ್ದಿ, ಗದಗ**

ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾದ ರಂಜಾನ್ ಹಬ್ಬದ ನಿಮಿತ್ತ ಗದಗ ನಗರದ ಡಂಬಳ ನಾಕಾ ಸಮೀಪದ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಶ್ರದ್ಧೆ ಮತ್ತು ಭಕ್ತಿಯಿಂದ ಸಾಮೂಹಿಕ ನಮಾಜ್ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸದಸ್ಯರು ಹಾಗೂ ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ. ಕಿಶೋರಬಾಬು ಜೆ. ನಾಗರಕಟ್ಟಿ ಅವರು ತಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಪ್ರಾರ್ಥನೆ ಸಲ್ಲಿಸಿದರು. ಇದೇ ವೇಳೆ ಕಾನೂನು, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ. ಪಾಟೀಲ ಅವರು ಉಪಸ್ಥಿತರಿದ್ದು, ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಕಾರ್ಯಕ್ರಮದಲ್ಲಿ ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕ್ಬರಸಾಬ ಬಬರ್ಚಿ, ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಬಿ.ಬಿ. ಅಸೂಟಿ, ಅಂಜುಮನ್ ಇಸ್ಲಾಂ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಸಾದಿಕ ನರಗುಂದ, ಶಿಕ್ಷಕರಾದ ಎನ್.ಐ. ಮಕಾನದಾರ, ಪ್ರಾಚ್ಯವಸ್ತು ಶಾಸ್ತ್ರಜ್ಞರಾದ ಅ.ದ. ಕಟ್ಟಿಮನಿ, ಫಾರೂಕ್ ಹುಬ್ಬಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದು, ಹಬ್ಬದ ಶುಭಾಶಯಗಳನ್ನು ಕೋರಿದರು.

### ಗದಗದಲ್ಲಿ ಕ್ರಾಂತಿ ಸೇನಾ ಹಾಗೂ ಮಹಿಳಾ ಮಂಡಳಿಯಿಂದ 650ಕ್ಕೂ ಹೆಚ್ಚು ಯುವತಿಯರಿಗೆ ಸಿನಿಮಾ ಪ್ರದರ್ಶನ!

# ಲವ್ ಜಿಹಾದ್ ವಿರುದ್ಧ ಜಾಗೃತಿ ಅಭಿಯಾನ!



> "ಪೋಷಕರು ಹಾಗೂ ಸಮಾಜ ಜಾಗೃತಿಯಾಗಿದ್ರೆ ಮಾತ್ರ ಇಂತಹ ಘಟನೆಗಳನ್ನು ತಡೆಹಿಡಿಯಲು ಸಾಧ್ಯ."
> **– ಬಾಬು ಬಾಕಳೆ,** ಕ್ರಾಂತಿ ಸೇನಾ ಜಿಲ್ಲಾ ಅಧ್ಯಕ್ಷ

**■ವಿಜಯಸಾಕ್ಷಿ ಸುದ್ದಿ, ಗದಗ**

ಹಿಂದೂ ಸಮಾಜದ ಜಾಗೃತಿಗಾಗಿ ಕ್ರಾಂತಿ ಸೇನಾ ಗದಗ ಜಿಲ್ಲಾ ಸಂಘಟನೆ ಹಾಗೂ ಶ್ರೀ ರಾಜರಾಜೇಶ್ವರಿ ಮಹಿಳಾ ಮಂಡಳದ ನೇತೃತ್ವದಲ್ಲಿ ಲವ್ ಜಿಹಾದ್ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ 650ಕ್ಕೂ ಹೆಚ್ಚು ಹಿಂದೂ ಯುವತಿಯರಿಗೆ "ಕೇರಳ ಸ್ಟೋರಿ–2" ಸಿನಿಮಾವನ್ನು ಪ್ರದರ್ಶಿಸಲಾಯಿತು.

ಕೇರಳದಲ್ಲಿ ನಡೆದ ನೈಜ ಘಟನೆ ಆಧಾರಿತ ಎಂದು ಹೇಳಲಾಗುವ ಈ ಚಿತ್ರವನ್ನು ಸಮಾಜದಲ್ಲಿ ಜಾಗೃತಿ ಹೆಚ್ಚಿಸುವ ನಿಟ್ಟಿನಲ್ಲಿ ಯುವತಿಯರಿಗೆ ತೋರಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಕ್ರಾಂತಿ ಸೇನಾ ಜಿಲ್ಲಾ ಅಧ್ಯಕ್ಷ ಬಾಬು ಬಾಕಳೆ, ಯುವತಿಯರನ್ನು ಮೋಸದ ಜಾಲಕ್ಕೆ ಸೆಳೆದು ಮತಾಂತರ ಮಾಡುವ ಘಟನೆಗಳ ಬಗ್ಗೆ ಎಚ್ಚರಿಕೆ ನೀಡಿದರು.

ಪೋಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಜೊತೆಗೆ ಅವರ ಚಟುವಟಿಕೆಗಳ ಮೇಲೂ ಗಮನ ಹರಿಸಬೇಕು ಎಂದು ಅವರು ಸಲಹೆ ನೀಡಿದರು. ಸಮಾಜದ ಪ್ರತಿಯೊಬ್ಬರೂ ಜಾಗೃತಿಯಿಂದ ನಡೆದುಕೊಂಡಾಗ ಮಾತ್ರ ಇಂತಹ ಘಟನೆಗಳಿಗೆ ಕಡಿವಾಣ ಹಾಕಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಹಿಳಾ ಸಂಘಟನೆಯ ಅಧ್ಯಕ್ಷರಾದ ರಾಣಿ ಚಂದಾವರಿ ಹಾಗೂ ರೇಣುಕಾ ಕಬಾಡಿ ಮಾತನಾಡಿ, ಯುವತಿಯರು ಸಮಾಜ ಸೇವಾ ಚಟುವಟಿಕೆಗಳಲ್ಲಿ ತೊಡಗಿ ಜಾಗೃತಿಯನ್ನು ಹೆಚ್ಚಿಸಬೇಕು ಎಂದು ಕರೆ ನೀಡಿದರು. ಶಾಲಾ–ಕಾಲೇಜುಗಳಲ್ಲಿ ಇಂತಹ ಪ್ರಕರಣಗಳು ಕಂಡುಬಂದರೆ ಹಿರಿಯರ ಗಮನಕ್ಕೆ ತರಬೇಕು ಎಂದರು.

ಇದೇ ಸಂದರ್ಭದಲ್ಲಿ ಯುವತಿಯರಿಗೆ ಲವ್ ಜಿಹಾದ್‌ಗೆ ಬಲಿಯಾಗದಂತೆ ಪ್ರಮಾಣ ವಚನ ಮಾಡಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರವೀಣ್ ಹಬೀಬ, ಭೀಮಾ ಕಾಟಿಗರ್, ಭರತ್ ಮರಿಯಪ್ಪನವರ್, ಶಿವು ಕುಂಬಾರ್, ಕಿರಣ ಪಟ್ಟಣಶೆಟ್ಟಿ, ಪವನ್ ಪುರದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಜಾತ್ರೆಗಳು ಭಕ್ತಿ ಭಾವವನ್ನು ಹೆಚ್ಚಿಸುತ್ತವೆ



**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಮಹಾತ್ಮರು ಹಾಗೂ ಪುಣ್ಯಪುರುಷರ ಸ್ಮರಣಾರ್ಥ ನಡೆಯುವ ಜಾತ್ರೆಗಳಲ್ಲಿ ಭಾಗವಹಿಸುವುದರಿಂದ ಜನರಲ್ಲಿ ಭಕ್ತಿ ಭಾವ ಹೆಚ್ಚಾಗುತ್ತದೆ ಎಂದು ಬಸವ ಬೆಳವಿ ವಿರಕ್ತಮಠದ ಶರಣ ಬಸವ ದೇವರು ಹೇಳಿದರು.

ಪಟ್ಟಣದ ಐತಿಹಾಸಿಕ ಸಿದ್ದೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಮಹಾ ರಥೋತ್ಸವದ ಬಳಿಕ ನಡೆದ ಅನುಭವ ಗೊಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರೆಗಳಲ್ಲಿ ಶರಣರು, ಸಂತರು ಹಾಗೂ ಮಹಾಂತರ ಪ್ರವಚನಗಳು ನಡೆಯುವುದರಿಂದ ಅಂತರಂಗ ಮತ್ತು ಬಹಿರಂಗ ಶುದ್ಧಿಯಾಗುವುದರ ಜೊತೆಗೆ ಭಕ್ತಿ ಭಾವಗಳು ಮತ್ತಷ್ಟು ಗಾಢವಾಗುತ್ತವೆ ಎಂದು ತಿಳಿಸಿದರು.

ಮುಳಗುಂದ ನಾಡು ಬಾಲಲೀಲಾ ಮಹಾಂತ ಶಿವಯೋಗಿಗಳಂತಹ ವೈರಾಗ್ಯನಿಧಿಗಳ ಜನ್ಮಭೂಮಿಯಾಗಿದ್ದು, ಇಲ್ಲಿ ಜನಿಸುವವರು ಪುಣ್ಯವಂತರಾಗಿದ್ದಾರೆ. ಯುಗಾದಿ ನಮ್ಮ ನಾಡಿನ ಹೊಸ ವರ್ಷದ ಆರಂಭವಾಗಿದ್ದು, ಇದೇ ಸಂದರ್ಭದಲ್ಲಿ ಸಿದ್ದೇಶ್ವರ ಜಾತ್ರಾ ಮಹೋತ್ಸವ ನಡೆಯುವುದು ವಿಶೇಷವಾಗಿದೆ ಎಂದರು.

ಈ ಕಾರ್ಯಕ್ರಮದಲ್ಲಿ ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು ಸಾನಿಧ್ಯ ವಹಿಸಿದ್ದರು. ಅಧ್ಯಕ್ಷತೆಯನ್ನು ರಾಮಣ್ಣ ಕಮಾಜಿ ವಹಿಸಿದ್ದರು. ಗೌರಮ್ಮ ಬಡ್ನಿ, ಎಸ್. ಎಂ. ನೀಲಗುಂದ, ಅಶೋಕ ಸೋನಗೋಜಿ, ಜಗದೀಶ ಬಟ್ಟೂರ, ನಾಗರಾಜ ದೇಶಪಾಂಡೆ, ಸಂಜಯ ನೀಲಗುಂದ, ಡಾ. ಎಸ್.ಸಿ. ಚವಡಿ, ಡಾ. ಬಸವರಾಜ ಬೊಮ್ಮನಹಳ್ಳಿ, ಕಾಶಿಮ ಜಮಾಲಸಾಬನವರ್ ಹಾಗೂ ಎಂ.ಎನ್. ಶೇಖ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ತೋಂಟದ ಶ್ರೀಗಳ ಸಾನ್ನಿಧ್ಯದಲ್ಲಿ ತೇರಿನ ಗಾಲಿ ಪೂಜಾ



**■ವಿಜಯಸಾಕ್ಷಿ ಸುದ್ದಿ, ಗದಗ**

ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ತೇರಿನ ಗಾಲಿ ಪೂಜಾ ಸಮಾರಂಭವು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಅವರ ಸಾನ್ನಿಧ್ಯದಲ್ಲಿ ಯಶಸ್ವಿಯಾಗಿ ನಡೆಯಿತು.

ಮಠದ ಸದ್ಭಕ್ತರು, ಭಕ್ತರು ಮತ್ತು ಸ್ಥಳೀಯ ಸಮುದಾಯದ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಕ್ತಿ ಭಾವದಿಂದ ಪೂಜೆ ನಡೆಸಿದರು.

ಜಾತ್ರಾ ಸಮಿತಿಯ ಅಧ್ಯಕ್ಷರಾದ ವಿನಾಯಕ ಮಾನ್ವಿ, ಉಪಾಧ್ಯಕ್ಷ ಶಿವಯ್ಯ ನಾಲ್ವತ್ವಾಡ್‌ಮಠ, ಸುಭಾಷ ಚನ್ನಪ್ಪನವರ, ಶ್ರೀಮತಿ ಸುಧಾ ಹುಚ್ಚಣ್ಣವರ, ಕೋಶಾಧ್ಯಕ್ಷ ವಿರುಪಾಕ್ಷಪ್ಪ ದಲಾಲಿ, ಸಹ ಕೋಶಾಧ್ಯಕ್ಷ ವೀರಣ್ಣ ಗಡಗಿ, ಕಾರ್ಯದರ್ಶಿ ಚೇತನ ಅಂಗಡಿ, ಸಹ ಕಾರ್ಯದರ್ಶಿ ಎಮ್. ಜಿ. ಹೂಗಾರ, ಚಂದ್ರಶೇಖರ ರಾಜೂರ, ಎಸ್.ವ್ಹಿ. ಪವಾಡಿಗೌಡ್ರ, ಸಂಘಟನಾ ಕಾರ್ಯದರ್ಶಿ ಉಮೇಶಗೌಡ ಪಾಟೀಲ, ಯಲ್ಲೂಸಾ ಹಬೀಬ್ ಮತ್ತು ಜಾತ್ರಾ ಸಮಿತಿಯ ಸರ್ವ ಪದಾಧಿಕಾರಿಗಳು, ಲಿಂಗಾಯತ ಪ್ರಗತಿಶೀಲ ಸಂಘದ ಪದಾಧಿಕಾರಿಗಳು, ಶೇಖಣ್ಣ ಕಳಸಾಪೂರ ಶೆಟ್ಟರ್, ಮ್ಯಾನೇಜರ್ ಎಂ.ಎಸ್. ಅಂಗಡಿ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

### ಶ್ರೀ ಮಳೆಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ

## ಲಿಂಗದೀಕ್ಷೆ ಮಾನವ ಜೀವನ ಸಾರ್ಥಕಗೊಳಿಸುವ ಶಕ್ತಿ ಸಾಧನ



> ಯುಗಾದಿಯಂದು ಬೆಳಗ್ಗಿನಿಂದಲೇ ನೂರಾರು ಭಕ್ತರು ಆಗಮಿಸಿ ಪವಿತ್ರ ಐತಿಹ್ಯಗಳ ದರ್ಶನ ಪಡೆದರು. ಇದೇ ವೇಳೆ ಶಿವಲಿಂಗ ಪೂಜೆ, ಜಂಗಮ ವಟುಗಳಿಗೆ ಅಯ್ಯಾಚಾರ ಹಾಗೂ ಲಿಂಗದೀಕ್ಷೆ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳು ಭಕ್ತಿಭಾವದಿಂದ ನೆರವೇರಿಸಲ್ಪಟ್ಟವು.

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಲಿಂಗದೀಕ್ಷೆ ಭಗವಂತನನ್ನು ಸಾಕ್ಷಾತ್ಕಾರಪಡಿಸಿಕೊಳ್ಳುವ ಚೈತನ್ಯಮಯ ಶಕ್ತಿ ಸಾಧನವಾಗಿದ್ದು, ಗುರುವರ್ಯರಿಂದ ಶಿವದೀಕ್ಷೆ ಪಡೆದು ಇಷ್ಟಲಿಂಗವನ್ನು ಪೂಜಿಸಿದರೆ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂದು ಕರೇವಾಡಿಮಠದ ಶ್ರೀ ಮಳೆಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಲಿಂಬಯ್ಯ ಸ್ವಾಮಿಮಠದಲ್ಲಿ ಯುಗಾದಿ ಅಂಗವಾಗಿ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ ವತಿಯಿಂದ ಐದು ವರ್ಷಗಳಿಗೊಮ್ಮೆ ನಡೆಯುವ ನಂದಿಪಟ ಆರೋಹಣ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮಗಳಿಗೆ ವಿಶೇಷ ಸ್ಥಾನಮಾನವಿದ್ದು, ಲಿಂಗಧಾರಣೆ ಮತ್ತು ಶಿವಪೂಜೆ ಆತ್ಮಬಲವನ್ನು ಹೆಚ್ಚಿಸುವುದರ ಜೊತೆಗೆ ಸಮಾಜದಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ನೀಡುತ್ತದೆ ಎಂದರು. ವಿಭೂತಿ, ಲಿಂಗ, ಜೋಳಿಗೆ ಮತ್ತು ದಂಡ ಇವು ಸಂಸ್ಕಾರದ ಪ್ರತೀಕಗಳಾಗಿವೆ ಎಂದು ವಿವರಿಸಿದರು.

ಸಾವಿರಾರು ವರ್ಷಗಳ ಪುರಾತನ ಇತಿಹಾಸ ಹೊಂದಿರುವ ಈ ಶ್ರೀಮಠವನ್ನು ಹಿರಿಯರು ಸಂಪ್ರದಾಯಬದ್ಧವಾಗಿ ನಡೆಸಿಕೊಂಡು ಬಂದಿದ್ದು, ಅದನ್ನು ಈಗಿನ ವಂಶಸ್ಥರು ಸಮರ್ಪಕವಾಗಿ ಮುಂದುವರಿಸಿಕೊಂಡು ಹೋಗುತ್ತಿರುವುದು ಸಂತೋಷಕರ ಸಂಗತಿ. ಯುಗಾದಿಯಂದು ಐದು ವರ್ಷಗಳಿಗೊಮ್ಮೆ ನಡೆಯುವ ಈ ವಿಶೇಷ ಕಾರ್ಯಕ್ರಮ ನಿರಂತರವಾಗಿ ನಡೆಯಲಿ ಎಂದು ಹಾರೈಸಿದರು.

ಲಿಂಬಯ್ಯಸ್ವಾಮಿಮಠದ ವಂಶಸ್ಥ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಮಾತನಾಡಿ, ಶ್ರೀಮಠದ ಐತಿಹ್ಯಗಳಾದ ನಂದಿಪಟ, ಶಿರಸ್ ಪವಾಡಗೈದ ಗಂಡುಗತ್ತರಿ, ವೀರಕಂಕಣ, ಬಲಮುರಿ ಶಂಖ, ಎರಮುರಿ ಬೆತ್ತ, ಏಕಗಳಲಿನ ಬೆತ್ತ, ಭಾಪಗೊಡಲಿ ಹಾಗೂ ಬ್ರಹ್ಮಕಪಾಲ ಇತ್ಯಾದಿ ಪವಿತ್ರ ವಸ್ತುಗಳನ್ನು ಐದು ವರ್ಷಗಳಿಗೊಮ್ಮೆ ಮಾತ್ರ ಹೊರತೆಗೆದು ಪೂಜೆ ಸಲ್ಲಿಸಿ ಭಕ್ತರಿಗೆ ದರ್ಶನಕ್ಕೆ ಇಡಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವೀರಭದ್ರಯ್ಯ ಹಿರೇಮಠ, ಸೋಮಯ್ಯ ಕಲ್ಮಠ, ಶಿವರಾಜ ಕರೇವಾಡಿಮಠ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಪ್ರತಿಷ್ಠಾನದ ಆನಂದಸ್ವಾಮಿ ಗಡ್ಡದೇವರಮಠ, ಚಿದಾನಂದ, ನಿರಂಜನ ಲಿಂಬಯ್ಯಸ್ವಾಮಿಮಠ, ಈರಣ್ಣ ಅಂಕಲಕೋಟಿ, ಶಾಂತರಾಜ ಓದುನವರ, ಮಹೇಶ, ವಿ.ಜಿ. ಪಡಗೇರಿ, ರಾಮಣ್ಣ ಪಡಗೇರಿ, ಎಸ್.ಜಿ. ಗುಳಗಣ್ಣವರ ಸೇರಿದಂತೆ ಅನೇಕರು ಭಾಗವಹಿಸಿದರು.



ನರೇಗಲ್ಲ: ಪಟ್ಟಣದ ಹೊಸ ಬಸ್ ನಿಲ್ದಾಣದ ಹತ್ತಿರದ ಮಾರುತಿ ದೇವಸ್ಥಾನದ ಮಹಾರಥೋತ್ಸವವು ಪ್ರತಿ ವರ್ಷದ ಯುಗಾದಿ ಪಾಢ್ಯ ನಿಮಿತ್ತ ಗುರುವಾರ ಸಂಜೆ ಸಡಗರ ಸಂಭ್ರಮದಿಂದ ಜರುಗಿತು. ದೇವಸ್ಥಾನದಿಂದ ಪ್ರಾರಂಭವಾದ ಮಹಾರಥೋತ್ಸವವು ಗದಗ ರಸ್ತೆಯ ಪೊಲೀಸ್ ಠಾಣೆಯ ವರೆಗೆ ಸಾಗಿ ಮರಳಿ ದೇವಸ್ಥಾನ ತಲುಪಿತು.

**ಯುಗಾದಿ ಅಂಗವಾಗಿ ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಬ್ರಹ್ಮ ಧ್ವಜಾರೋಹಣ**

## ರಾಮರಾಜ್ಯ ಸ್ಥಾಪನೆಗಾಗಿ ದೇವಸ್ಥಾನಗಳಲ್ಲಿ ಸಾಮೂಹಿಕ ಪ್ರಾರ್ಥನೆ



■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಯುಗಾದಿ ಹೊಸ ವರ್ಷದ ಅಂಗವಾಗಿ ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಪಟ್ಟಣದ ವಿವಿಧ ದೇವಸ್ಥಾನಗಳಲ್ಲಿ ಬ್ರಹ್ಮಧ್ವಜಾರೋಹಣ ನೆರವೇರಿಸಿ, ರಾಮರಾಜ್ಯ ಸ್ಥಾಪನೆಗಾಗಿ ಸಾಮೂಹಿಕ ಪ್ರಾರ್ಥನೆ ಮತ್ತು ಪ್ರತಿಜ್ಞೆ ಕೈಗೊಳ್ಳಲಾಯಿತು.

ಪಟ್ಟಣದ ಶ್ರೀ ಸೋಮೇಶ್ವರ ದೇವಸ್ಥಾನ, ಹಾವಳಿ ಆಂಜನೇಯ ದೇವಸ್ಥಾನ, ಈಶ್ವರನಗರದ ಈಶ್ವರ ದೇವಸ್ಥಾನ, ಶಿಗ್ಲಿಯ ಬಸವೇಶ್ವರ ದೇವಸ್ಥಾನ ಸೇರಿದಂತೆ ಅನೇಕ ದೇವಸ್ಥಾನಗಳಲ್ಲಿ ಬ್ರಹ್ಮಧ್ವಜವನ್ನು ಏರಿಸಲಾಯಿತು.

ಈ ಸಂದರ್ಭದಲ್ಲಿ ಸಮಿತಿ ಸದಸ್ಯರು ಮತ್ತು ಭಕ್ತರು ಒಗ್ಗಟ್ಟಾಗಿ ರಾಮರಾಜ್ಯದ ಸ್ಥಾಪನೆಗಾಗಿ ಸಂಕಲ್ಪ ಕೈಗೊಂಡರು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಮಿತಿ ಸದಸ್ಯರು, ಬ್ರಹ್ಮಧ್ವಜವು ಧರ್ಮ, ಪಾವಿತ್ರ್ಯ ಮತ್ತು ವಿಜಯದ ಸಂಕೇತವಾಗಿದ್ದು, ಯುಗಾದಿಯ ದಿನದಂದು ಬ್ರಹ್ಮಾಂಡದಲ್ಲಿನ ಪ್ರಜಾಪತಿ ಲಹರಿಗಳು ಭೂಮಿಯ ಮೇಲೆ ಹೆಚ್ಚು ಆಗಮಿಸುತ್ತವೆ. ಈ ಲಹರಿಗಳು ಕಲಶದ ಮೂಲಕ ಮನೆಗಳಿಗೆ ಪ್ರವೇಶಿಸಿ ವರ್ಷಪೂರ್ತಿ ಶುಭಫಲ ನೀಡುತ್ತವೆ ಎಂಬ ನಂಬಿಕೆಯಿಂದ ಬ್ರಹ್ಮಧ್ವಜಾರೋಹಣ ನಡೆಸಲಾಗುತ್ತದೆ ಎಂದು ವಿವರಿಸಿದರು. ಇದೇ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ಶತಮಾನಗಳ ತಪಸ್ಸಿನ ಫಲವಾಗಿ ಭವ್ಯ ರಾಮಮಂದಿರ ನಿರ್ಮಾಣವಾಗಿರುವುದನ್ನು ಉಲ್ಲೇಖಿಸಿ, ಭಾರತದಲ್ಲಿ ರಾಮರಾಜ್ಯ ಸ್ಥಾಪನೆಗಾಗಿಯೂ ಎಲ್ಲರೂ ಒಗ್ಗಟ್ಟಾಗಿ ಧಾರ್ಮಿಕ ಮೌಲ್ಯಗಳನ್ನು ಕಾಪಾಡಬೇಕು ಎಂದು ಕರೆ ನೀಡಿದರು.

ಹಿಂದೂ ಸಮಾಜ ಎದುರಿಸುತ್ತಿರುವ ಅಪಮಾನ, ಅತ್ಯಾಚಾರ ಮತ್ತು ಮತಾಂತರದ ವಿರುದ್ಧ ಜಾಗೃತಿ ಮೂಡಿಸಿ, ದೇವಸ್ಥಾನಗಳ ರಕ್ಷಣೆ ಹಾಗೂ ಸಂಸ್ಕೃತಿ-ಪರಂಪರೆಯ ಉಳಿವಿಗೆ ಬದ್ಧರಾಗಬೇಕು ಎಂದು ಪ್ರತಿಜ್ಞೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಮಿತಿಯ ಕಾರ್ಯಕರ್ತರು, ಧರ್ಮಪ್ರೇಮಿಗಳು, ಹಿಂದುತ್ವನಿಷ್ಠರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.

**ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನಕ್ಕೆ ಮಹತ್ವದ ವೇದಿಕೆ**

## ಧಾರವಾಡದಲ್ಲಿ ಕರಿಯರ್ ಮೇಳ



■ **ವಿಜಯಸಾಕ್ಷಿ ಸುದ್ದಿ, ಧಾರವಾಡ**

2025-26ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ರಾಜ್ಯದ 34 ಡಯಟ್ ಕೇಂದ್ರಗಳಲ್ಲಿ ಜಿಲ್ಲಾ ವೃತ್ತಿಪರ ಹಾಗೂ ವೃತ್ತಿ ಮಾರ್ಗದರ್ಶನ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಇದರ ಭಾಗವಾಗಿ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ವೃತ್ತಿ ಆಯ್ಕೆ ಕುರಿತು ಸಮಗ್ರ ಮಾರ್ಗದರ್ಶನ ನೀಡುವ ಉದ್ದೇಶದಿಂದ ಧಾರವಾಡ ನಗರದ ಶಿಕ್ಷಕಿಯರ ಸರಕಾರಿ ತರಬೇತಿ ಸಂಸ್ಥೆ (ಟಿಸಿಡಬ್ಲ್ಯು)ಯಲ್ಲಿ ಮಾರ್ಚ್ 26, 2026ರಂದು ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕರಿಯರ್ ಮೇಳವನ್ನು ಆಯೋಜಿಸಲಾಗಿದೆ.

ಈ ಮೇಳದಲ್ಲಿ ವಿದ್ಯಾರ್ಥಿಗಳಿಗೆ ಅವರ ಆಸಕ್ತಿ, ಸಾಮರ್ಥ್ಯ ಹಾಗೂ ಭವಿಷ್ಯದ ಉದ್ಯೋಗಾವಕಾಶಗಳನ್ನು ಗಮನದಲ್ಲಿಟ್ಟುಕೊಂಡು ತಜ್ಞ-ರಿಂದ ಮಾರ್ಗದರ್ಶನ ನೀಡಲಾಗುತ್ತದೆ. ಸರ್ಕಾರದ ವಿವಿಧ ಕೌಶಲ್ಯಾಭಿವೃದ್ಧಿ ಯೋಜನೆಗಳು, ಸ್ವಯಂ ಉದ್ಯೋಗಾವಕಾಶಗಳು, ಉದ್ಯಮಶೀಲತೆಗೆ ದೊರೆಯುವ ಪ್ರೋತ್ಸಾಹಗಳು ಹಾಗೂ ಸ್ಥಳೀಯ ಮಟ್ಟದಲ್ಲಿ ಲಭ್ಯವಿರುವ ಉದ್ಯೋಗ ಅವಕಾಶಗಳ ಬಗ್ಗೆ ವಿವರವಾದ ಮಾಹಿತಿ ಒದಗಿಸಲಾಗುತ್ತದೆ.

ಜಿಲ್ಲಾ ಕೌಶಲ್ಯಾಭಿವೃದ್ಧಿ ಸಂಸ್ಥೆ, ಜಿಟಿಟಿಸಿ, ಐಐಟಿ, ಐಐಐಟಿ, ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಶ್ವವಿದ್ಯಾಲಯದಂತಹ ಪ್ರಮುಖ ಸಂಸ್ಥೆಗಳು ಈ ಮೇಳದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ವೃತ್ತಿ ಆಯ್ಕೆ ಕುರಿತು ಸಲಹೆ ನೀಡಲಿವೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳ ಮುಂದೆ ಅನೇಕ ಆಯ್ಕೆಗಳು ಲಭ್ಯವಿದ್ದು, ಸರಿಯಾದ ಕ್ಷೇತ್ರವನ್ನು ಆಯ್ಕೆ ಮಾಡುವುದು ಸವಾಲಿನ ಸಂಗತಿಯಾಗಿರುವುದರಿಂದ, ಡಯಟ್‌ನಲ್ಲಿ ವೃತ್ತಿ ಮಾರ್ಗದರ್ಶನ ಘಟಕವನ್ನು ಸ್ಥಾಪಿಸಿ ಎಲ್ಲ ವಿದ್ಯಾ ಸಂಸ್ಥೆಗಳು ಮತ್ತು ಕೋರ್ಸ್‌ಗಳ ಮಾಹಿತಿಯನ್ನು ಒಂದೇ ಕಡೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ.

ಹತ್ತನೇ ತರಗತಿ ಹಾಗೂ ಪದವಿಪೂರ್ವ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಉಪನಿರ್ದೇಶಕರು ಹಾಗೂ ಡಯಟ್ ಪ್ರಾಚಾರ್ಯರಾದ ಬಿ.ಎಂ. ನಾಲತವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ

### ವಿರುಪಾಕ್ಷಯ್ಯ ಹಿರೇಮಠ



**ಗದಗ:** ತಾಲೂಕಿನ ನರಸಾಪೂರ ಗ್ರಾಮದ ಖಾದಿ ಪ್ಲಾಟ್ ಬಳಿಯ ಮಂಜು ಬುದ್ದಿಮಾಂದ್ಯ ಸ್ಕೂಲ್ ಹತ್ತಿರದ ನಿವಾಸಿ ವಿರುಪಾಕ್ಷಯ್ಯ ತ್ರಂಬಕೇಶ್ವರಯ್ಯ ಹಿರೇಮಠ(76) ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

**ಸಿದ್ದೇಶ್ವರ ಜಾತ್ರಾ ಮಹೋತ್ಸವದ ಅನುಭವ ಗೋಷ್ಠಿಯಲ್ಲಿ ಅನ್ನದಾನೇಶ್ವರ ಮಹಾಸ್ವಾಮೀಜಿ!**

# ಶ್ರೇಷ್ಠ ಪರಂಪರೆ ಹೊಂದಿರುವ ದೇಶ ಭಾರತ




1) ಜಾನಪದ ಕಲೆಗಳ ಉಳಿವಿಗೆ ಒತ್ತು
2) ಜಾನಪದ ಕಲೆಗಳಲ್ಲಿ ಬದುಕಿನ ಮೌಲ್ಯಗಳು ಅಡಕ
3) ಆಧುನಿಕರಣದಿಂದ ನಶಿಸುತ್ತಿರುವ ಪರಂಪರೆ
4) ಯುವಕರು ಪರಂಪರೆ ಉಳಿಸಲು ಮುಂದಾಗಬೇಕು
5) ಶಿಕ್ಷಣದ ಜೊತೆಗೆ ಸಂಸ್ಕಾರವೂ ಅಗತ್ಯ
6) ಐತಿಹಾಸಿಕ ದೇವಸ್ಥಾನಗಳ ಸಂರಕ್ಷಣೆ ಅಗತ್ಯ

■ **ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಶ್ರೇಷ್ಠ ಪರಂಪರೆ ಹೊಂದಿರುವ ದೇಶ ನಮ್ಮ ಭಾರತವಾಗಿದ್ದು, ಇಂತಹ ಪುಣ್ಯ ಭೂಮಿಯಲ್ಲಿ ಜನಿಸಿರುವುದೇ ನಮ್ಮೆಲ್ಲರ ಸೌಭಾಗ್ಯ ಎಂದು ಸುಕ್ಷೇತ್ರ ಮಣಕವಾಡ ದೇವ ಮಂದಿರದ ಅಭಿನವ ಅನ್ನದಾನೇಶ್ವರ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ಐತಿಹಾಸಿಕ ಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಅನುಭವ ಗೋಷ್ಠಿಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಭಾರತ ದೇಶವು ತನ್ನ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯಿಂದ ಇಡೀ ಜಗತ್ತಿಗೆ ಬೆಳಕು ನೀಡುತ್ತಿರುವ ದೇಶವಾಗಿದ್ದು, ಇಲ್ಲಿ ಅನೇಕ ಭಾಷೆಗಳು, ಕಲೆಗಳು ಹಾಗೂ ವಿವಿಧ ಜನಾಂಗಗಳು ಒಂದೇ ಮನಸ್ಸಿನಿಂದ ಸಹಬಾಳ್ವೆ ನಡೆಸುತ್ತಿರುವುದು ವಿಶೇಷವಾಗಿದೆ ಎಂದರು. ಜಾನಪದ ಕಲೆಗಳು ನಮ್ಮ ಬದುಕಿಗೆ ದಾರಿ ದೀಪವಾಗಿದ್ದು, ನೈತಿಕತೆ ಹಾಗೂ ಹೃದಯವಂತಿಕೆ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸಿಕೊಟ್ಟಾಗ ಬದುಕು ಸುಂದರವಾಗುತ್ತದೆ ಎಂದು ತಿಳಿಸಿದರು.

ಕರಿಯಪ್ಪ ಕೊಡವಳ್ಳಿ ಅವರು ಜಾನಪದ ಕಲೆಗಳ ಮಹತ್ವ ಕುರಿತು ಉಪನ್ಯಾಸ ನೀಡಿ, ಹಿಂದಿನ ಕಾಲದಲ್ಲಿ ಜಾನಪದ ಕಲೆಯಲ್ಲಿ ಬದುಕಿನ ಸಾರವಿದ್ದು, ರೈತ ಜೀವನ, ಮದುವೆ ಸಂಪ್ರದಾಯಗಳು ಹಾಗೂ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ಅನೇಕ ಅಂಶಗಳು ಅದರಲ್ಲಿ ಅಡಗಿದ್ದವು. ಆದರೆ ಇಂದಿನ ಆಧುನಿಕರಣ, ಜಾಗತೀಕರಣ ಮತ್ತು ಯಾಂತ್ರೀಕರಣದಿಂದ ಜಾನಪದ ಕಲೆಗಳು ನಶಿಸುತ್ತಿದ್ದು, ಅವುಗಳನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಮಾತನಾಡಿ, ಇಂತಹ ಐತಿಹಾಸಿಕ ಸಿದ್ದೇಶ್ವರ ದೇವಸ್ಥಾನಗಳನ್ನು ಉಳಿಸಿ ಬೆಳೆಸಲು ಯುವಕರು ಮುಂದಾಗಬೇಕು. ದೇವಸ್ಥಾನದ ಅಭಿವೃದ್ಧಿಗೆ ಪ್ರಾಚ್ಯವಸ್ತು ಇಲಾಖೆಯಿಂದ ಒಂದು ಕೋಟಿ ರೂ. ಅನುದಾನ ಮಂಜೂರಾಗಿದ್ದು, ಪಟ್ಟಣದ ಸಮಗ್ರ ಅಭಿವೃದ್ಧಿಗೆ ಸಹಕಾರ ನೀಡುವ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ವಿಜಯಲಕ್ಷ್ಮಿ ಹಿರೇಮಠರಿಂದ ವಚನ ಸಂಗೀತ ಕಾರ್ಯಕ್ರಮ ನಡೆಯಿತು. ರೈತರು, ಪೌರಕಾರ್ಮಿಕರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು, ಬಿ.ವಿ. ಸುಂಕಾಪೂರ, ಜಾತ್ರಾ ಸಮಿತಿ ಅಧ್ಯಕ್ಷ ಸಂಜಯ ನೀಲಗುಂದ, ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜು ಕುರಡಗಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

**ಲಕ್ಷ್ಮೇಶ್ವರ ಪೊಲೀಸರ ಭರ್ಜರಿ ಕಾರ್ಯಾಚರಣೆ: ಲಕ್ಷಾಂತರ ಮೌಲ್ಯದ ಚಿನ್ನಾಭರಣ ವಶ, ಆರೋಪಿ ಬಂಧನ**

## ಹಗಲು ಮನೆ ಕಳ್ಳತನ ಪ್ರಕರಣಗಳಲ್ಲಿ ಭಯ ಮೂಡಿಸಿದ್ದ ಆರೋಪಿ ಅರೆಸ್ಟ್!

■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಶಿಗ್ಲಿ ಗ್ರಾಮದಲ್ಲಿ ಫೆ. 2 ರಂದು ಹಾಗೂ ಶಿರಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ಳಟ್ಟಿಯಲ್ಲಿ ನಡೆದ ಹಗಲು ಮನೆ ಕಳ್ಳತನ ಪ್ರಕರಣಗಳಲ್ಲಿ ಭಯ ಮೂಡಿಸಿದ್ದ ಕಳ್ಳನನ್ನು ಲಕ್ಷ್ಮೇಶ್ವರ ಪೊಲೀಸರು ಯಶಸ್ವಿಯಾಗಿ ಬಂಧಿಸಿದ್ದಾರೆ.

ಬಂಧಿತ ಆರೋಪಿಯನ್ನು ಹಾವೇರಿ ಜಿಲ್ಲೆಯ ರಾಮಾಪುರ ಗ್ರಾಮದ ನಿವಾಸಿ ಚಮನಸಾಬ್ ಸಿ ಪಾಟೀಲ ಎಂದು ಗುರುತಿಸಲಾಗಿದೆ. ಆರೋಪಿಯಿಂದ 21 ಗ್ರಾಂ ಬಂಗಾರ ಆಭರಣಗಳು, 100 ಗ್ರಾಂ ಬೆಳ್ಳಿ ಆಭರಣಗಳು ಮತ್ತು 14,000 ನಗದು ವಶಪಡಿಸಲಾಯಿತು.

ಗದಗ ಜಿಲ್ಲೆ ಪೊಲೀಸ್ ಅಧೀಕ್ಷಕ ರೋಹನ್ ಜಗದೀಶ್ ಮತ್ತು ಗದಗ ಉತ್ತರ ವಿಭಾಗದ ಡಿಎಸ್‌ಪಿ ಮುರ್ತಾಜಾ ಖಾದ್ರಿ ಮಾರ್ಗದರ್ಶನದಲ್ಲಿ, ಸಿಪಿಐ ಬಿ.ವಿ. ನ್ಯಾಮಗೌಡ ನೇತೃತ್ವದಲ್ಲಿ, ಪಿಎಸ್‌ಐ ನಾಗರಾಜ್ ಗಡ್ಡ ಮತ್ತು ಪಿಎಸ್‌ಐ ಟಿ.ಕೆ. ರಾಠೋಡ್ ಅವರ ಸಹಕಾರದೊಂದಿಗೆ ಆರೋಪಿಯನ್ನು ಬಂಧಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಲಕ್ಷ್ಮೇಶ್ವರ ಪೊಲೀಸ್ ಸಿಬ್ಬಂದಿ, ಆರ್.ಎಸ್. ಯರಗಟ್ಟಿ, ಎಮ್.ಎ. ಶೇಖ್, ಎಮ್.ಎಸ್. ಬಳ್ಳಾರಿ, ಆನಂದ್ ಕಮ್ಮಾರ್, ಸಿ.ಎಸ್. ಮಠಪತಿ, ಡಿ.ಎಸ್. ನದಾಫ್, ಎಚ್.ಐ. ಕಲ್ಲಣ್ಣವರ, ಪಾಂಡುರಂಗ್ ರಾವ್, ಮದುಚಂದ್ರ ಧಾರವಾಡ, ಮಾರ್ತಾಂಡ ಉಪ್ಪಾರ, ಮಾಂತೇಶ ಐಗಾರ, ಗುರು ಬೂದಿಹಾಳ ಮತ್ತು ಟೆಕ್ನಿಕಲ್ ಸೆಲ್ ಗದಗದ ಸಂಜು ಕೊರಡೂರು ಸೇರಿದಂತೆ ತಂಡದೊಂದಿಗೆ ಕಾರ್ಯನಿರ್ವಹಿಸಿದರು.

ಈ ಕಾರ್ಯಕ್ಕೆ ಎಸ್‌ಪಿ ರೋಹನ್ ಜಗದೀಶ್ ಮೆಚ್ಚುಗೆ ವ್ಯಕ್ತಪಡಿಸಿದ್ದು, ಸಾರ್ವಜನಿಕರ ಸುರಕ್ಷತೆಗೆ ಪೊಲೀಸ್ ದಳದ ಸಮರ್ಪಣೆ ಮತ್ತು ಧೈರ್ಯವನ್ನು ಪ್ರಶಂಸಿಸಿದ್ದಾರೆ.



## ಮೀಸಲಾತಿ ಬದಲಾವಣೆಗೆ ತೀವ್ರ ವಿರೋಧ

■ **ವಿಜಯಸಾಕ್ಷಿ ಸುದ್ದಿ, ಗದಗ**

ಅನುಸೂಚಿತ ಜಾತಿಗಳ ಉಪವರ್ಗೀಕರಣ ಕುರಿತ 2025ರ ಕಾಯ್ದೆ ವಿರುದ್ಧ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಕರ್ನಾಟಕ ಬಂಜಾರ ಮಹಾಸಭಾ, ಹಳೆಯ ಮೀಸಲಾತಿ ಪದ್ಧತಿಯನ್ನೇ ಮುಂದುವರಿಸಲು ಆಗ್ರಹಿಸಿ ಗದಗ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಫ.ಕ. ಓ.ಠ.32137/2025 ಪ್ರಕರಣಕ್ಕೆ ಅಂತಿಮ ತೀರ್ಪು ಹೊರಬರುವವರೆಗೆ ಕರ್ನಾಟಕ ಅನುಸೂಚಿತ ಜಾತಿಗಳು (ಉಪವರ್ಗೀಕರಣ) ಕಾಯ್ದೆ-2025 ಜಾರಿಗೊಳಿಸಬಾರದು. ಜಾತಿ ಪ್ರಮಾಣಪತ್ರ ನೀಡಿಕೆ, ಸರ್ಕಾರಿ ಹುದ್ದೆಗಳ ಭರ್ತಿ ಹಾಗೂ ಶೈಕ್ಷಣಿಕ ಪ್ರವೇಶಗಳನ್ನೂ ಹಳೆಯ ಮೀಸಲಾತಿ ನಿಯಮಾವಳಿಗಳ ಪ್ರಕಾರವೇ ಮುಂದುವರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಮಹಾಸಭಾ ಅಧ್ಯಕ್ಷ ಶಿವಪ್ಪ ಟೋಪಣ್ಣ ನಾಯಕ್, ರಾಜ್ಯ ಸರ್ಕಾರದ ಆಂತರಿಕ ಮೀಸಲಾತಿ ಜಾರಿ ನಿರ್ಧಾರದಿಂದ ಬಂಜಾರ, ಭೋವಿ, ಕೊರಚ ಹಾಗೂ ಕೊರಮ ಸಮುದಾಯಗಳಿಗೆ ಅನ್ಯಾಯವಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಉಪವರ್ಗೀಕರಣ, ರೋಸ್ಟರ್ ವ್ಯವಸ್ಥೆ ಹಾಗೂ ಕಾಯ್ದೆಗೆ ಆಧಾರವಾಗಿರುವ ಪ್ರಾಯೋಗಿಕ ಮಾಹಿತಿ ತಾರತಮ್ಯಪೂರ್ಣವಾಗಿದ್ದು, ಸಮುದಾಯಗಳ ವಿರುದ್ಧ ಪೂರ್ವಾಗ್ರಹದಿಂದ ರೂಪಿಸಲಾಗಿದೆ ಎಂದು ಆರೋಪಿಸಿದರು. ಜೊತೆಗೆ, 02-08-2025ರಂದು ಒಬ್ಬ ಸದಸ್ಯರ ತನಿಖಾ ಆಯೋಗ ನೀಡಿದ ಶಿಫಾರಸುಗಳು ಸಹ ಈ ಮಾಹಿತಿಗೆ ವಿರುದ್ಧವಾಗಿದ್ದು, ಭೇದ ಭಾವ ಮತ್ತು ಕಾನೂನುಬಾಹಿರವಾಗಿವೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ, ನ್ಯಾಯಾಂಗ ತೀರ್ಪು ಬರುವವರೆಗೆ ಕಾಯ್ದೆ ಜಾರಿಗೆ ತರಬಾರದು ಎಂಬುದಾಗಿ ಮಹಾಸಭಾ ಸರ್ಕಾರವನ್ನು ಮನವಿ ಮಾಡಿದೆ.

ಈ ವೇಳೆ ಪ್ರಧಾನ ಕಾರ್ಯದರ್ಶಿ ಬಾಲಚಂದ್ರ ತುಳಸಿಮನಿ, ಕಾರ್ಯದರ್ಶಿ ಡಾ. ಗುಂಡಪ್ಪ ನಾಯಕ, ಅನಿಲ್ ಕಾರಬಾರಿ, ವೆಂಕಟೇಶ್ ರಾಠೋಡ್, ಮಾರುತಿ ಲಮಾಣಿ ಸೇರಿದಂತೆ ವಿವಿಧ ತಾಂಡಾಗಳ ಹಿರಿಯರು, ಪದಾಧಿಕಾರಿಗಳು ಹಾಗೂ ಯುವಕರು ಉಪಸ್ಥಿತರಿದ್ದರು.



## ಯುಗಾದಿ ಹಬ್ಬಕ್ಕೆ "ಜನರಿಂದ ನಾನು ಮೇಲೆ ಬಂದೆ" ಚಿತ್ರದ ಪೋಸ್ಟರ್ ರಿಲೀಸ್




■ **ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಶ್ರೀಮಂಜುನಾಥ ಫಿಲ್ಮ್ಸ್‌ನ "ಜನರಿಂದ ನಾನು ಮೇಲೆ ಬಂದೆ" ಚಲನಚಿತ್ರದ ಪೋಸ್ಟರ್ ಅನ್ನು ಯುಗಾದಿ ಹಬ್ಬದ ಸಂದರ್ಭದಲ್ಲಿ ಶ್ರೀವಿದ್ಯಾವಾಚಸ್ಪತಿ ಡಾ. ವಿಶ್ವಸಂತೋಷ ಭಾರತಿ ಶ್ರೀಪಾದರು ಅಮೃತ ಹಸ್ತದಿಂದ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ನವಿಲುಗರಿ ನವೀನ್ ಪಿ.ಬಿ. ನಿರ್ದೇಶನದ ಈ ಸಿನಿಮಾ, ಡ್ಯಾನ್ಸ್ ಮೂಲಕ ತನ್ನ ಬದುಕನ್ನು ರೂಪಿಸಿಕೊಂಡ ಯುವಕನ ನೈಜ ಕಥೆಯನ್ನು ಸಾರುತ್ತದೆ. 'ಡ್ಯಾನ್ಸ್ ರಾಜಾ ಡ್ಯಾನ್ಸ್' ಖ್ಯಾತಿಯ ವಿನೋದ್‌ರಾಜ್ ಈ ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಿರ್ದೇಶಕ ನವಿಲುಗರಿ ನವೀನ್ ಪಿ.ಬಿ. ಅವರು, ಅವರ ಪಾತ್ರ ಚಿತ್ರಕ್ಕೆ ಪ್ರಮುಖ ಮಹತ್ವ ನೀಡುತ್ತದೆ ಎಂದು ಹೇಳಿದ್ದಾರೆ.

ಚಿತ್ರದಲ್ಲಿ ನಾಯಕನಾಗಿ ಗಂಧರ್ವರಾಜ್ ಅಭಿನಯಿಸುತ್ತಿದ್ದು, ಅಭಿಜಿತ್, ಶೈಲಜಾ ದ್ವಾರಕೇಶ್, ಚಾಮರಾಜ ಮಾಸ್ಟರ್, ಶಿವಕುಮಾರ್ ಆರಾಧ್ಯ, ಶ್ಯಾಮಲಮ್ಮ, ಜಯಪ್ರಕಾಶ್ ನಾಗತಿಹಳ್ಳಿ, ಸುನಂದಾ ಕಲಬುರಗಿ, ಪ್ರವೀಣಾ ಕುಲಕರ್ಣಿ ಸೇರಿದಂತೆ ಹಲವಾರು ಕಲಾವಿದರು ಮುಖ್ಯ ಪಾತ್ರಗಳಲ್ಲಿ ಕಾಣಿಸುತ್ತಾರೆ.

ಗೌತಮ್ ಟಿ.ಆರ್. ಛಾಯಾಗ್ರಹಣ ಹಾಗೂ ಸಂಕಲನ ನಿರ್ವಹಿಸುತ್ತಿದ್ದಾರೆ. ಪೃಥ್ವಿರಾಜ್ ಸಂಕಿ, ಭುವನ್ ಹಾಗೂ ನವೀನ್ ಪಿ.ಬಿ. ಸಾಹಿತ್ಯ, ಪ್ರಣವ್ ಸತೀಶ್ ಸಂಗೀತ, ಷಣ್ಮುಖ ಗೋವಿಂದರಾಜು, ರೇವಣ್ಣಸಿದ್ದ ಫುಲಾರಿ, ಎ.ಆರ್. ತನ್ವೀರ್, ಯಶಸ್ವಿನಿ ಕಾಪ್ಸೆ ಹಾಡುಗಳನ್ನು ನೀಡಿದ್ದಾರೆ. ಮೇ ತಿಂಗಳಲ್ಲಿ ಚಿತ್ರ ರಿಲೀಸ್ ಆಗುವ ಸಾಧ್ಯತೆ ಇದೆ.

**ಸಹನಾ ಎ. ಕಾರ್ಕಳರಿಂದ ವಕಾಲತ್ತಿನ ಕೌಶಲ್ಯಗಳ ಕುರಿತು ಮಾರ್ಗದರ್ಶನ**

## ಗದಗದಲ್ಲಿ ವಕೀಲ ವೃತ್ತಿ ಕೌಶಲ್ಯಗಳ ಕುರಿತು ಕಾರ್ಯಾಗಾರ ಯಶಸ್ವಿ




■ **ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ ಮಾರ್ಚ್ 18, 2026 ರಂದು "ವಕೀಲ ವೃತ್ತಿಯ ಕೌಶಲ್ಯಗಳು ಮತ್ತು ನೈಪುಣ್ಯತೆಗಳು" ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರ ಯಶಸ್ವಿಯಾಗಿ ಆಯೋಜಿಸಲಾಯಿತು.

> "ಭಾಷಾ ಕೌಶಲ್ಯವೇ ವಕೀಲರ ಅಸ್ತ್ರ. ಕಾನೂನು ಜ್ಞಾನಕ್ಕಿಂತಲೂ ಸಂವಹನ ಕೌಶಲ್ಯವು ನ್ಯಾಯ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ"
>
> – **ಸಹನಾ ಎ ಕಾರ್ಕಳ,** ಪ್ರಾಧ್ಯಾಪಕರು, ಬೆಂಗಳೂರಿನ ಕೆಎಲ್‌ಇ ಕಾನೂನು ಮಹಾವಿದ್ಯಾಲಯ.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ. ಬೆಂಗಳೂರಿನ ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ

ಕುಮಾರಿ ಸಹನಾ ಎ. ಕಾರ್ಕಳ, ವಕೀಲರ ಯಶಸ್ಸಿಗೆ ಅಗತ್ಯವಿರುವ ಪ್ರಮುಖ ಕೌಶಲ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ನೀಡಿದರು. ವಾದಪತ್ರ ರಚನೆ, ನ್ಯಾಯಾಲಯದಲ್ಲಿ ವಾದ ಮಂಡನೆ, ಹಾಗೂ ವಕಾಲತ್ತಿನ ಪ್ರಾಯೋಗಿಕ ನೈಪುಣ್ಯತೆಗಳ ಮಹತ್ವವನ್ನು ವಿವರಿಸಿದರು.

ಡಾ. ಶ್ರೀನಿವಾಸ ಸಿ. ಪಾಲಕೊಂಡ ಕಾರ್ಯಾಗಾರದ ಪರಿಚಯವನ್ನು ನೀಡಿದರು. ಎಸ್.ಎ. ಹಾದಿಮನಿ, ಸ್ಥಳೀಯ ಆಡಳಿತ ಮಂಡಳಿ ಸದಸ್ಯರು ಹಾಗೂ ಮಹಾವಿದ್ಯಾಲಯದ ಪ್ರತಿನಿಧಿಗಳು ಅಧ್ಯಕ್ಷೀಯ ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು.

ಕಾರ್ಯಕ್ರಮವು ಕುಮಾರಿ ವಿದ್ಯಾಶ್ರೀ ಹನಮನಾಳ ಅವರ ಪ್ರಾರ್ಥನಾ ಗೀತೆಯಿಂದ ಆರಂಭವಾಯಿತು. ಸಂಪನ್ಮೂಲ ವ್ಯಕ್ತಿಗಳನ್ನು ಕುಮಾರಿ ಸಹನಾ ಪಲ್ಲೇದ ಸ್ವಾಗತಿಸಿದರು. ಕುಮಾರ ಆಕಾಶ ಬಿ. ಭದ್ರಾಪೂರ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮವನ್ನು ಕುಮಾರಿ ರಂಜಿತಾ ಪಾಟೀಲ ನಿರೂಪಿಸಿದರು.

ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯಿಂದ ಕಾರ್ಯಾಗಾರ ಯಶಸ್ವಿಯಾಗಿ ನೆರವೇರಿತು.

## ಸುರಭಿ ವೃದ್ಧಾಶ್ರಮದಲ್ಲಿ ಕೆ.ಎಚ್. ಪಾಟೀಲರ ಜಯಂತ್ಯುತ್ಸವ



■ವಿಜಯಸಾಕ್ಷಿ ಸುದ್ದಿ, ಗದಗ

ಸಮಾಜಮುಖಿ ಕಾರ್ಯಗಳಿಗೆ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡಿದ್ದ ಕೆ.ಎಚ್. ಪಾಟೀಲ ಅವರ 101ನೇ ಜನ್ಮಜಯಂತಿ ಅಂಗವಾಗಿ ಹುಲಕೋಟಿಯ ಸುರಭಿ ವೃದ್ಧಾಶ್ರಮದಲ್ಲಿ ಅನ್ನ, ಹೊದಿಕೆ ಹಾಗೂ ಆಹಾರ ವಿತರಣೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಸ್.ಆರ್. ನೀಲಗುಂದ ಅವರು, ಕೆ.ಎಚ್. ಪಾಟೀಲರು ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಕೃಷಿ, ಅರಣ್ಯ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಗಳು ಸದಾಕಾಲ ಸ್ಮರಣೀಯವಾಗಿವೆ ಎಂದು ಹೇಳಿದರು. ದಯೆ, ಸಮಾನತೆ, ಸೇವಾ ಮನೋಭಾವ, ಸ್ವಾಭಿಮಾನ, ತ್ಯಾಗ, ಸಹಕಾರ, ಐಕ್ಯತೆ ಮತ್ತು ನಿಷ್ಠೆ ಎಂಬ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡ ಅವರು, ಕರ್ನಾಟಕದ ಸಹಕಾರ ಚಳವಳಿಯ ಭೀಷ್ಮರಾಗಿ, ಜನಪರ ನಾಯಕನಾಗಿ ಹಾಗೂ ಹುಲಕೋಟಿಯ ಹೆಮ್ಮೆಯ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ವೃದ್ಧಾಶ್ರಮದ ಮೇಲ್ವಿಚಾರಕ ರಾಜೇಸಾಬ್ ಎಕ್ಲಾಸಪುರ ಅವರು ವೃದ್ಧರ ದಿನನಿತ್ಯದ ಜೀವನ, ಅವರ ಅಗತ್ಯಗಳು ಹಾಗೂ ಮನೋಭಿಲಾಷೆಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು, ಮಹಿಳಾ ವೇದಿಕೆ ಸದಸ್ಯರು, ಎನ್.ಎಸ್.ಎಸ್. ಹಾಗೂ ಸಾಂಸ್ಕೃತಿಕ ವಿಭಾಗದ ಸಂಚಾಲಕರು, ಐಕ್ಯುಎಸಿ ತಂಡದ ಸದಸ್ಯರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಚರಂಡಿಯಲ್ಲೇ ಕುಡಿಯುವ ನೀರಿನ ಪೈಪ್ – ಗ್ರಾಮಸ್ಥರಲ್ಲಿ ಆಕ್ರೋಶ**

# ಸೊರಟೂರದಲ್ಲಿ ಸ್ವಚ್ಛತೆಯೇ ಮರೀಚಿಕೆ!

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣ ಸಮೀಪದ ಸೊರಟೂರ ಗ್ರಾಮದಲ್ಲಿ ಸ್ವಚ್ಛತೆ ನಿರ್ವಹಣೆಯ ಕೊರತೆಯಿಂದ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ. ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಗ್ರಾಮದಲ್ಲಿ ಸ್ವಚ್ಛತೆಯೇ ಮರೀಚಿಕೆಯಾಗಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಹೆಚ್ಚಾಗಿದೆ.

ಗ್ರಾಮದ ಬಹುತೇಕ ಚರಂಡಿಗಳು ಹೂಳು ತುಂಬಿಕೊಂಡಿರುವುದರಿಂದ ಕೊಳಚೆ ನೀರು ಸರಾಗವಾಗಿ ಹರಿಯದೇ ದುರ್ವಾಸನೆ ಬೀರುತ್ತಿದೆ. ಕೆಲವೆಡೆ ಸಿಸಿ ರಸ್ತೆಗಳ ಮೇಲೆಯೇ ಚರಂಡಿ ನೀರು ಹರಿಯುತ್ತಿದ್ದು, ವೃದ್ಧರು ಮತ್ತು ಮಕ್ಕಳು ಸಂಚರಿಸಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಕುರಿತು ಗ್ರಾಮಸ್ಥರು ಹಲವಾರು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಗ್ರಾಮದ ಸೌಂದರ್ಯ ಹೆಚ್ಚಿಸಲು ನಿರ್ಮಿಸಲಾದ ಸಿಸಿ ರಸ್ತೆಗಳು ಮತ್ತು ಚರಂಡಿಗಳು ಸಮರ್ಪಕ ನಿರ್ವಹಣೆಯ ಕೊರತೆಯಿಂದ ನಿರುಪಯೋಗಿಯಾಗಿವೆ. ಇದರಿಂದ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿದ್ದು, ಮಕ್ಕಳು ಹಾಗೂ ವೃದ್ಧರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಿರುವುದಾಗಿ ಸ್ಥಳೀಯರು ತಿಳಿಸಿದ್ದಾರೆ.

> "ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಕಲುಷಿತ ನೀರು ಬಳಕೆಯಿಂದ ಜನರು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು."
>
> **– ವೆಂಕಟೇಶ, ಗ್ರಾಮಸ್ಥ**

> "ಚರಂಡಿ ಸ್ವಚ್ಛತಾ ಕಾರ್ಯ ನಿತ್ಯ ನಡೆಯುತ್ತಿದೆ. ಪೈಪ್‌ಲೈನ್ ಅನ್ನು ಬೇರೆಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ. ಶೀಘ್ರದಲ್ಲೇ ಸಮಸ್ಯೆ ಬಗೆಹರಿಸಲಾಗುತ್ತದೆ."
>
> **– ಸಂತೋಷ ಎಂ.ಎಚ್.,** ಪಿಡಿಒ

ಇನ್ನು ಹಳಿಕೆಮ್ಮ ದೇವಿ ದೇವಸ್ಥಾನದ ಎದುರುಗಡೆ ಇರುವ ಕುಡಿಯುವ ನೀರಿನ ಟ್ಯಾಂಕ್‌ಗೆ ಸಂಪರ್ಕಿಸಿದ ಪೈಪ್‌ಲೈನ್ ಚರಂಡಿಯಲ್ಲೇ ಹಾದು ಹೋಗುತ್ತಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ. ಪೈಪ್‌ಗಳಲ್ಲಿ ಉಂಟಾಗುತ್ತಿರುವ ಸೋರುವಿಕೆಯಿಂದ ಚರಂಡಿ ನೀರು ಮಿಶ್ರಣವಾಗಿ ಕಲುಷಿತ ನೀರು ಟ್ಯಾಂಕ್‌ಗೆ ಸೇರುತ್ತಿರುವ ಶಂಕೆ ವ್ಯಕ್ತವಾಗಿದ್ದು, ಗ್ರಾಮಸ್ಥರು ಅನಾರೋಗ್ಯಕ್ಕೆ ಒಳಗಾಗುತ್ತಿರುವುದಾಗಿ ದೂರಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಗಮನ ಹರಿಸಿ ಸಮಸ್ಯೆ ಪರಿಹರಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಇಲ್ಲವಾದರೆ ಉಗ್ರ ಹೋರಾಟ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

## "ಮನೋರಮಾ ಕಾಲೇಜ್: ಬಿಸಿಎ 3ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಶ್ರೇಷ್ಠ ಸಾಧನೆ







■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಬಿಸಿಎ ಶೈಕ್ಷಣಿಕ ಸಾಲಿನ ಮೂರನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ ಮೆಚ್ಚುಗೆಗೆ ಪಾತ್ರವಾಗಿದೆ.

ಈ ವರ್ಷ ಕುಮಾರಿ ಮೆಹೆಕ್ ದುಖಾನದಾರ ಪ್ರಥಮ ಸ್ಥಾನವನ್ನು ಪಡೆದು 545 ಅಂಕಗಳೊಂದಿಗೆ ಸಾಧನೆ ಮಾಡಿದ್ದಾರೆ. ವಿಶೇಷವಾಗಿ ಅಕೌಂಟಿಂಗ್ ವಿಷಯದಲ್ಲಿ 100 ಕ್ಕೆ 100 ಅಂಕಗಳನ್ನು ಗಳಿಸಿ ಶ್ರೇಷ್ಠತೆಯನ್ನು ತೋರಿಸಿದ್ದಾರೆ.

**ಪ್ರಮುಖ ಸ್ಥಾನಗಳು**

1) ದ್ವಿತೀಯ ಸ್ಥಾನ: ಮೇಘಾ ಅಂಗಡಿ – 534 ಅಂಕ

2) ತೃತೀಯ ಸ್ಥಾನ: ಸೌಮ್ಯಾ ಬಣ್ಣದಬಾವಿ – 531 ಅಂಕ

3) ನಾಲ್ಕನೇ ಸ್ಥಾನ: ಮೆಹತಾಬಬಾನು ಖಾತರಕಿ – 528 ಅಂಕ

4) ಐದನೇ ಸ್ಥಾನ: ಸಾರ್ಥ ಬೇವಿನಕಟ್ಟಿ 4 525 ಅಂಕ

ಮಹಾವಿದ್ಯಾಲಯದಲ್ಲಿ ಒಟ್ಟು 53 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ವರ್ಗದಲ್ಲಿ ಉತ್ತೀರ್ಣರಾಗಿದ್ದು, 16 ವಿದ್ಯಾರ್ಥಿಗಳು ಪಾಸ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ.

ಮಹಾವಿದ್ಯಾಲಯದ ಚೇರಮನ್ನರಾದ ಎನ್ ಎಮ್ ಕುಡತರಕರ, ಪ್ರಾಚಾರ್ಯ ಬಿ ಎಸ್ ಹಿರೇಮಠ, ಕಾರ್ಯದರ್ಶಿಗಳಾದ ಮಂಜುನಾಥ ಕುಡತರಕರ, ಆಡಳಿತಾಧಿಕಾರಿಗಳು ಕಿಶೋರ್ ಮುದಗಲ್ಲ, ನಿರ್ದೇಶಕರು ಸಂಜಯ ಕುಡತರಕರ, ಚೇತನ ಕುಡತರಕರ, ಮತ್ತು ಸಂಯೋಜಕರು ಪ್ರೋ ಸವಿತಾ ಪೂಜಾರ ಸೇರಿದಂತೆ ಸಿಬ್ಬಂದಿ ತಂಡವು ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿ ಗೌರವಿಸಿದ್ದಾರೆ.

**ಬಸ್ತಿಬಣದ ಶ್ರೀ ಮಾರುತಿ ದೇವಸ್ಥಾನದಲ್ಲಿ ಯುಗಾದಿ ಸಂಭ್ರಮ**

## ಶ್ರೀ ಮಾರುತಿ ದೇವಸ್ಥಾನದಲ್ಲಿ ಅದ್ದೂರಿ ರಥೋತ್ಸವ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಬಸ್ತಿಬಣದ ಶ್ರೀ ಮಾರುತಿ ದೇವಸ್ಥಾನದಲ್ಲಿ ಯುಗಾದಿ ದಿನದಂದು ಸಂಜೆ ಅದ್ದೂರಿಯಾಗಿ ರಥೋತ್ಸವ ಜರುಗಿತು. ಸಾವಿರಾರು ಭಕ್ತರ ಜಾಥಾ, ಜಯಘೋಷ ಮತ್ತು ಭಕ್ತಿ ಭಾವದ ಮಧ್ಯೆ ರಥೋತ್ಸವ ವೈಭವದಿಂದ ನಡೆಯಿತು.

ಯುಗಾದಿಯಂದು ಮಾರುತಿ ದೇವರಿಗೆ ವಿಶೇಷ ಪೂಜೆ, ಅಲಂಕಾರ ಮತ್ತು ದೈವೀ ಭಕ್ತಿಪೂರ್ವಕ ಕಾರ್ಯಕ್ರಮಗಳು ನೆರವೇರಿಸಲ್ಪಟ್ಟವು. ರಥೋತ್ಸವದ ಸಮಾರಂಭಕ್ಕೆ ಪಟ್ಟಣದ ಕರೇವಾಡಿಮಠದ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯ ದೊರೆತಿದ್ದು, ಕಾರ್ಯಕ್ರಮಕ್ಕೆ ಮತ್ತಷ್ಟು ವೈಭವವನ್ನು ನೀಡಿತು.

ಮಾರುತಿ ದೇವಸ್ಥಾನದಲ್ಲಿ ಬಲಮುರಿ, ವಿಘ್ನೇಶ್ವರ, ನವಗ್ರಹ, ಶ್ರೀ ರಾವಿ–ಲಕ್ಷ್ಮಣ–ಸೀತಾಮಾತಾ ಮೂರ್ತಿ ಮಹಾರುದ್ರಾಭಿಷೇಕ ಪೂಜೆ, ಹೋಮ ಹವನ ಹಾಗೂ ಸೋಮವಾರದ ಕಡುಬಿನ ಕಾಳಗ ಜರುಗವು ಸಹ ಸಂಪ್ರದಾಯದಂತೆ ನೆರವೇರಿತು. ಮಾರುತಿ ದೇವಸ್ಥಾನ ಕಮಿಟಿಯವರು, ಹಾಗೂ ಸಾರ್ವಜನಿಕರು ಅನೇಕ ಮುಖಂಡರು ಕಾರ್ಯಕ್ರಮದಲ್ಲಿ ಹಾಜರಿದ್ದರು.



**ಶ್ರೀ ಅನ್ನದಾನೇಶ್ವರ ಮಠದ ಆವರಣದಲ್ಲಿ ರಾಷ್ಟ್ರೀಯ ಮಹಿಳಾ ದಿನಾಚರಣೆ**

## ಸ್ವಚ್ಛತೆ, ಪ್ರಾರ್ಥನೆ ಮಹಾತ್ಮಾ ಗಾಂಧಿ ಅವರ ಮಹಾ ಮಂತ್ರಗಳಾಗಿದ್ದವು



■ವಿಜಯಸಾಕ್ಷಿ ಸುದ್ದಿ, ಅಬ್ಬಿಗೇರಿ

"ಮಹಾತ್ಮಾ ಗಾಂಧಿ ಎಂದಿಗೂ ಸ್ವಚ್ಛತೆ ಮತ್ತು ಪ್ರಾರ್ಥನೆಗೆ ವಿಶೇಷ ಮಹತ್ವ ನೀಡಿದ್ದು, ಅವೆರಡೂ ಅವರ ಮಹಾ ಮಂತ್ರಗಳಾಗಿವೆ. ಅಬ್ಬಿಗೇರಿಯ ಮಹಿಳೆಯರು ಬೀದಿ ಸ್ವಚ್ಛತೆಯನ್ನು ಪ್ರೋತ್ಸಾಹಿಸಿದ್ದು ನಿಜಕ್ಕೂ ಸ್ತುತ್ಯವಾಗುವ ಕಾರ್ಯ" ಎಂದು ಮಾಜಿ ಶಾಸಕ ಡಿ. ಆರ್. ಪಾಟೀಲ ಹೇಳಿದರು.

ಅಬ್ಬಿಗೇರಿ ಗ್ರಾಮದ ಶ್ರೀ ಅನ್ನದಾನೇಶ್ವರ ಮಠದ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು,

ಪ್ರಾಧ್ಯಾಪಕಿ ಡಾ. ರತ್ನಾ ನೀರಲೋಟಿ ಮಾತನಾಡಿ, "ಮಹಿಳೆ ಎಂದಿಗೂ ಅಬಲೆಯಲ್ಲ, ಇಂದಿನ ದಿನದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಸಬಲಳಾಗಿದ್ದಾರೆ. ಇಂತಹ ದಿನಾಚರಣೆಗಳು ಮಹಿಳೆಯ ಸ್ಥಾನಮಾನವನ್ನು ಸಾರುತ್ತವೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರೋಣ ಸ್ಪಂದನಾ ಮಹಿಳಾ ಮಂಡಳದ ಅಧ್ಯಕ್ಷೆ ಶಶಿಕಲಾ ಪಾಟೀಲ ಮಾತನಾಡಿ, "ಒಂದು ಕಾಲದಲ್ಲಿ ಮಹಿಳೆಯ ಮುಖ್ಯ ಪಾತ್ರ ಮನೆ ಹಾಗೂ ಕುಟುಂಬದಲ್ಲಿತ್ತು. ಇಂದಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಮುನ್ನುಗ್ಗಿ ಸಾಧನೆ ಮಾಡುತ್ತಿದ್ದಾರೆ. ಸೂಕ್ತ ಅವಕಾಶ ಮತ್ತು ಪ್ರೋತ್ಸಾಹ ದೊರೆತರೆ ಅವರು ತಮ್ಮ ಶಕ್ತಿಯನ್ನು ಜಗತ್ತಿಗೆ ತೋರಿಸುತ್ತಾರೆ" ಎಂದು ಹೇಳಿದರು. ಸಭೆಯನ್ನು ಉದ್ದೇಶಿಸಿ ತಾ.ಪಂ. ಕಾರ್ಯನಿರ್ವಾಹಣಾಧಿಕಾರಿ ಚಂದ್ರಶೇಖರ ಕಂದಕೂರು ಮಾತನಾಡಿ, ಮಹಿಳೆಯು ಜೀವನದಲ್ಲಿ ವಿವಿಧ ಹಂತಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಾರೆ. ಸಮಾನವಾದ ನ್ಯಾಯ, ಶಕ್ತಿ, ತಾಳ್ಮೆ ಮತ್ತು ಸಂಯಮ ಅವಶ್ಯಕ. ಈ ದಿನಾಚರಣೆ ಅದ್ಭುತ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷೆ ಲಲಿತಾ ರಾಠೋಡ, ಪಿಎಸ್‌ಐ ಐಶ್ವರ್ಯ ನಾಗರಾಳ, ರೇಷ್ಮಾ ದೇಸಾಯಿ, ಜಿ.ಪಂ. ಮಾಜಿ ಉಪಾಧ್ಯಕ್ಷೆ ರೂಪ ಅಂಗಡಿ, ಗ್ರಾಮ ಆಡಳಿತಾಧಿಕಾರಿ ಕಾವ್ಯಾ ಕಾಳೆ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

> ಕಾರ್ಯಕ್ರಮದಲ್ಲಿ ಶಿವಬಾಯವ್ವ ಗುಗ್ಗರಿ, ವಿಜಯಲಕ್ಷ್ಮಿ ಗುಗ್ಗರಿ, ಮೇಘನಾ ಮತ್ತು ಮುಖ್ಯಶಿಕ್ಷಕ ಡಿ. ಎಚ್. ಪರಂಗಿಯವರನ್ನು ಸನ್ಮಾನಿಸಲಾಯಿತು. ಇದಲ್ಲದೆ, ಕಳೆದ ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

## ಶ್ರೀ ಗಂಜೀ ಬಸವೇಶ್ವರ 64ನೇ ಜಾತ್ರಾ ಮಹೋತ್ಸವ: ನೂತನ ಸಮಿತಿ ರಚನೆ







■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಗಂಜೀ ಬಸವೇಶ್ವರ ದೇವಸ್ಥಾನದಲ್ಲಿ ನಡೆಯಲಿರುವ 64ನೇ ಜಾತ್ರಾ ಮಹೋತ್ಸವದ ಅಂಗವಾಗಿ ಮಹತ್ವದ ಸಭೆ ಜರುಗಿದ್ದು, ಜಾತ್ರಾ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಸಭೆಯಲ್ಲಿ ಕರಬಸಯ್ಯ ಬಸಯ್ಯ ನಾಲ್ವತ್ತಾವಡಮಠ ಅವರನ್ನು ಸಭಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದ್ದು, ಕಳೆದ ವರ್ಷದ ಲೆಕ್ಕಪರಿಶೀಲನೆಯ ಬಳಿಕ ಜಾತ್ರಾ ಮಹೋತ್ಸವದ ಹೊಸ ಪದಾಧಿಕಾರಿಗಳನ್ನು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಜಾತ್ರಾ ಸಮಿತಿಯ ಅಧ್ಯಕ್ಷರಾಗಿ ಪ್ರಶಾಂತ ಶಂಕ್ರಯ್ಯ ಶಾಬಾದಿಮಠ, ಉಪಾಧ್ಯಕ್ಷರಾಗಿ ಸೋಮಣ್ಣ ಕೊಟ್ರಪ್ಪ ಪುರದ, ಕೋಶಾಧ್ಯಕ್ಷರಾಗಿ ಶಂಕರ ಅಂದಾನಪ್ಪ ಕರಭಿಷ್ಠಿ, ಕಾರ್ಯದರ್ಶಿಯಾಗಿ ಸಿದ್ಧಲಿಂಗೇಶ ಬಸಪ್ಪ ಸಂಗನಾಳ, ಸಹಕಾರ್ಯದರ್ಶಿಯಾಗಿ ಪ್ರಶಾಂತ ಮಲ್ಲೇಶಪ್ಪ ಮುದೇಗೊಣ್ಣ ಅವರನ್ನು ಆಯ್ಕೆ ಮಾಡಲಾಯಿತು.

ಸಲಹಾ ಸಮಿತಿ ಸದಸ್ಯರಾಗಿ ಪರಪ್ಪ ಫಕ್ಕೀರಪ್ಪ ಕಮತರ, ಎಫ್.ವಿ. ಮರಿಗೌಡ್ರ, ಸೋಮು ಮುಳಗುಂದ, ಪ್ರಶಾಂತ ನರೇಗಲ್ಲ, ಸತೀಶ ಗಿಡ್ಡಹನಮಣ್ಣವರ, ಶಿವಪ್ಪ ಮುಳ್ಳಾಳ, ವೀರಣ್ಣ ಗಡಗಿ, ಸಿದ್ದು ಗಾಣಿಗೇರ, ಸಿದ್ದು ಉಮಚಗಿ, ಪ್ರಭು ಕಲಬಂಡಿ, ಶಂಕರ ಕರಬಿಷ್ಟಿ, ಶಿವಾನಂದ ಹೂಗಾರ, ಮಲ್ಲಪ್ಪ ಉಮಚಗಿ, ಬಸವರಾಜ ನಾಯ್ಕರ, ಸುನೀಲ ಕೊತಬಾಳ, ಗುರುಸಿದ್ದಪ್ಪ ಹಾವಣಗಿ, ಶರಣಪ್ಪ ತಾಂಬೆ, ಮಲ್ಲಪ್ಪ ಕರಬಿಷ್ಟಿ, ಮಂಜುನಾಥ ಲಕ್ಷೆಟ್ಟಿ, ಬಸವರಾಜ ಕಬನೂರ, ಬಸಪ್ಪ ಪಡಗದ ಹಾಗೂ ಮಂಜುನಾಥ ಪುರದ ಅವರನ್ನು ಆಯ್ಕೆ ಮಾಡಲಾಗಿದೆ.

ಸಭೆಯಲ್ಲಿ ಓಣಿಯ ಹಿರಿಯರಾದ ನಿಂಗಪ್ಪ ಪಡಗದ, ಜಿ.ಎಲ್. ಮರಿಗೌಡ್ರ, ರುದ್ರಪ್ಪ ಕಲಬಂಡಿ, ಈರಣ್ಣ ಕರಭಿಷ್ಟಿ, ರಮೇಶ ಕುರ್ತಕೋಟಿ, ಬಸಯ್ಯ ಹಿರೇಮಠ, ಕುಮಾರ ವಿಭೂತಿಮಠ, ಮಂಜುನಾಥ ಲಕ್ಕುಂಡಿ, ಸಿದ್ದಪ್ಪ ಹೊಂಬಾಳಿ ಸೇರಿದಂತೆ ಅನೇಕರು ಭಾಗವಹಿಸಿ ಮಾರ್ಗದರ್ಶನ ನೀಡಿದರು.

## ಹಗರಿಬೊಮ್ಮನಹಳ್ಳಿ ವಿದ್ಯುತ್ ನೌಕರರ ಸಂಘಕ್ಕೆ ಜೆ. ನಂದೀಶ್ ಅಧ್ಯಕ್ಷರಾಗಿ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ವಿದ್ಯುತ್ ನೌಕರರ ಸಂಘ (659/466) ನೂತನ ಅಧ್ಯಕ್ಷರಾಗಿ ಜೆ. ನಂದೀಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಬಿ.ಹೆಚ್. ಮಯೂರ್ ಅವರು ಆಯ್ಕೆಯಾಗಿರುವುದಾಗಿ ತಿಳಿದು ಬಂದಿದೆ.

ಪಟ್ಟಣದ ಸಂಘದ ಕಚೇರಿಯಲ್ಲಿ ಪೂರ್ವನಿಗದಿಯಂತೆ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಹೊನ್ನೂರಪ್ಪ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ 2026□29ನೇ ಸಾಲಿನ ಸ್ಥಳೀಯ ಸಮಿತಿಯ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಕೈಗೊಳ್ಳಲಾಯಿತು.

ಸಭೆಯಲ್ಲಿ ಸರ್ವ ಸದಸ್ಯರ ಸಮ್ಮುಖದಲ್ಲಿ ಸರ್ವಾನುಮತದಿಂದ ವಿವಿಧ ಹುದ್ದೆಗಳಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಂಘದ ದೌರ್ಬಲ್ಯಗಳನ್ನು ಸರಿಪಡಿಸಿ, ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಕಾರ್ಯನಿರ್ವಹಿಸಬೇಕೆಂದು ಹೊನ್ನೂರಪ್ಪ ಅವರು ನೂತನ ಪದಾಧಿಕಾರಿಗಳಿಗೆ ಕರೆ ನೀಡಿದರು.

ಇದೇ ವೇಳೆ ಉಪಾಧ್ಯಕ್ಷರಾಗಿ ಎಸ್. ಪ್ರಭಾಕರ್, ಖಜಾಂಚಿಯಾಗಿ ಕೆ. ಕಾಳಪ್ಪ, ಸಹ ಕಾರ್ಯದರ್ಶಿಯಾಗಿ ಕೆ. ಆನಂದ್ ಆಯ್ಕೆಯಾಗಿದ್ದಾರೆ. ಸದಸ್ಯರಾಗಿ ಪ್ರೇಮ್ ಕುಮಾರ್, ಎಸ್. ದೊಡ್ಡ ಬಸವರಾಜ್, ಎಂ. ಮಲ್ಲಿಕಾರ್ಜುನ ಹಾಗೂ ಬಿ. ಉಮೇಶ್ ಅವರು ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ಪದಾಧಿಕಾರಿಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ವಿಜಯಲಕ್ಷ್ಮಿ, ಕೊಟ್ರೇಶ್, ವೆಂಕಟೇಶ್, ಪ್ರಕಾಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



## ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಸಾಧಕರ ಸಾಲಿನಲ್ಲಿ ಇದ್ದಾರೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದಲ್ಲಿನ ಮನೋರಮಾ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಹಿಳೆಯರ ಸಾಧನೆ, ಶಕ್ತಿ ಮತ್ತು ಸಮಾನತೆಯ ಪ್ರಾಮುಖ್ಯತೆಯನ್ನು ಹಿಗ್ಗಿಸುವಂತೆ ಕಾರ್ಯಕ್ರಮ ಆಯೋಜಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಪಾರ್ವತಿದೇವಿ ಶಾಬಾದಿಮಠ ಮಾತನಾಡಿ, "ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಸಾಧಕರ ಸಾಲಿನಲ್ಲಿ ಇದ್ದಾರೆ. ಯಾವುದೇ ಸಾಧನೆ ಸಾಧಿಸಲು ಶಿಕ್ಷಣ ಅತ್ಯವಶ್ಯಕವಾಗಿದೆ. ಜೊತೆಗೆ ಸಹಕಾರ, ತಾಳ್ಮೆ, ಸಹಾನುಭೂತಿ ಹಾಗೂ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು, ಸಮಾನತೆಯ ತಳಹದಿಯ ಮೇಲೆ ಸಾಗಬೇಕು ಎಂದು ಹೇಳಿದರು.

ಮಹಾವಿದ್ಯಾಲಯದ ಪ್ರಾಚಾರ್ಯ ಬಿ ಎಸ್ ಹಿರೇಮಠ ಮಾತನಾಡಿ, "ಸಾವಿತ್ರಿಬಾಯಿ ಫುಲೆ, ಬೆಳವಡಿ ಮಲ್ಲಮ್ಮ, ಕಿತ್ತೂರ ರಾಣಿ ಚೆನ್ನಮ್ಮ, ಓನಕಿ ಓಬವ್ವ, ಬಚೇಂದ್ರಿ ಪಾಲ್ ಸೇರಿದಂತೆ 12ನೇ ಶತಮಾನದಿಂದ ಮಹಿಳೆಯರಿಗೆ ಮುಕ್ತವಾಗಿ ವ್ಯಕ್ತಿ ಮಾತುಕತೆ ಮತ್ತು ಕೌಶಲ್ಯ ಪ್ರದರ್ಶನದ ಅವಕಾಶ ಸಿಕ್ಕಿತ್ತು. ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ನೀಲಾಂಬಿಕೆ, ಗಂಗಾಬಿಕೆ, ನಾಗಲಾಂಬಿಕೆ, ಶರಣರನ್ನು ಸ್ಮರಿಸುತ್ತಾ ಮಹಿಳೆಯರ ಶಕ್ತಿಯ ಮಹತ್ವವನ್ನು ಉಲ್ಲೇಖಿಸುತ್ತೇವೆ ಎಂದರು.

ಇನ್ನೋರ್ವ ಅತಿಥಿಗಳಾಗಿ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ನಮ್ರತಾ ಕುಡತರಕರ ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರ್ಮನ್ ರಾದ ಎನ್ ಎಮ್ ಕುಡತರಕರ ರವರು ವಹಿಸಿದ್ದರು.

ಆಡಳಿತಾಧಿಕಾರಿಗಳಾದ ಕಿಶೋರ್ ಮುದಗಲ್ಲ, ಸಂಸ್ಥೆಯ ಕಾರ್ಯಕರ್ತರಾಗಿ ಮಂಜುನಾಥ ಕುಡತರಕರ, ಸಂಜಯ ಕುಡತರಕರ, ಚೇತನ ಕುಡತರಕರ ಹಾಗೂ ಬಿಸಿಎ ಸಂಯೋಜಕರಾದ ಸವಿತಾ ಪೂಜಾರ, ಪ್ರೋ ಸಂಗಮೇಶ ಹಾದಿಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಇಂದಿನಿಂದ ಹಜರತ್ ಸಯ್ಯದ ಶಾ ಖ್ವಾಜಾ ಉರುಸು ಆರಂಭ

■ ವಿಜಯಸಾಕ್ಷಿ ಸುದ್ದಿ, ರೋಣ

ಪಟ್ಟಣದ ಇತಿಹಾಸ ಪ್ರಸಿದ್ಧ ಹಿಂದು-ಮುಸ್ಲಿಂ ಭಾವೈಕ್ಯತೆಯ ಶ್ರದ್ಧಾ ಕೇಂದ್ರವಾದ ಹಜರತ್ ಸಯ್ಯದ ಶಾ ಖ್ವಾಜಾ ಹುಸೇನ ಶಾವಲಿ ಚಿಸ್ತಿ ಅಲ್ ಖಾದ್ರಿ ಶರಣರ ಉರುಸು ಧಾರ್ಮಿಕ ಕಾರ್ಯಕ್ರಮವು ಇಂದಿನಿಂದ ಮಾರ್ಚ್ 24ರವರೆಗೆ ಜರುಗಲಿದೆ ಎಂದು ಹಜರತ್ ಸೈಯದ ಶಾ ಸುಲೇಮಾನ ಶಾವಲಿ ಅಜ್ಜನವರು ತಿಳಿಸಿದ್ದಾರೆ.



ರೋಣ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರಿಗೆ ಆಧ್ಯಾತ್ಮಿಕ ಕೇಂದ್ರವಾಗಿರುವ ಈ ದರ್ಗಾದ ಉರುಸು ಈ ವರ್ಷವೂ ವಿಜೃಂಭಣೆಯಿಂದ ನಡೆಯಲಿದ್ದು, ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಿದೆ.

ಮಾರ್ಚ್ 22ರಂದು ಸಂಜೆ ವಾದ್ಯಮೇಳದೊಂದಿಗೆ ಗಂಧದ ಮೆರವಣಿಗೆ ಜರುಗಲಿದ್ದು, ಮಾರ್ಚ್ 23ರಂದು ಸಂಜೆ 6 ಗಂಟೆಗೆ 20ನೇ ವರ್ಷದ ಸರ್ವಧರ್ಮ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನದಲ್ಲಿ ಗುಲಗಂಜಿ ಮಠದ ಗುರುಪಾದ ದೇವರು, ಮಾರನಬಸರಿ ಗ್ರಾಮದ ಸರ್ವಧರ್ಮ ಸಮನ್ವಯ ಪೀಠದ ಶಿವಮೂರ್ತಿ ಶ್ರೀಗಳು, ಚರಂತೇಶ್ವರ ವಿರಕ್ತಮಠದ ಶರಣಬಸವ ಶ್ರೀಗಳು ಸಾನಿಧ್ಯ ವಹಿಸಲಿದ್ದಾರೆ. ಶಾಸಕ ಜಿ.ಎಸ್. ಪಾಟೀಲರು ಅಧ್ಯಕ್ಷತೆ ವಹಿಸಲಿದ್ದಾರೆ.

ಮಾರ್ಚ್ 24ರಂದು ಉರುಸು ಜಿಯರಾತ್ ನಡೆಯಲಿದ್ದು, ಸಾವಿರಾರು ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ.

ದಾನಪ್ಪ ಕಿರೇಸೂರ ಮಾತನಾಡಿ, ರೋಣದ ದರ್ಗಾ ಹಿಂದೂ-ಮುಸ್ಲಿಂರ ಭಾವೈಕ್ಯತೆಯ ಪ್ರತೀಕವಾಗಿದ್ದು, ಸಾವಿರಾರು ಭಕ್ತರು ನಡೆದುಕೊಂಡೇ ದರ್ಗಾಕ್ಕೆ ಬಂದು ತಮ್ಮ ಇಷ್ಟಾರ್ಥಗಳನ್ನು ಸಲ್ಲಿಸುತ್ತಾರೆ. ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದು ಈ ಪುಣ್ಯಕ್ಷೇತ್ರದ ಮಹತ್ವವನ್ನು ತೋರಿಸುತ್ತದೆ ಎಂದರು.

ಪಟ್ಟಣದ ಸಮಸ್ತ ಭಕ್ತರು ಉರುಸು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಲ್ಲಯ್ಯ ಮಹಾಪುರುಷಮಠ, ಎಚ್. ಎಚ್. ಇಡ್ಲಿ, ಅಂದಾನಪ್ಪ ಗಿರಡ್ಡಿ, ಜಗದೀಶ್ ಬ್ಯಾಳಿ, ಮುತ್ತಪ್ಪ ಚಳಿಗೇರಿ, ಫಕ್ಕಿರಗೌಡ ತಿಮ್ಮನಗೌಡ, ಪ್ರಭುಗೌಡ ಪಾಟೀಲ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

## ಹಗರಿಬೊಮ್ಮನಹಳ್ಳಿಯಲ್ಲಿ ರಂಜಾನ್ ಹಬ್ಬದ ಸಂಭ್ರಮ

# ಮುಸ್ಲಿಂ ಬಾಂಧವರಿಂದ ವಿಶೇಷ ಪ್ರಾರ್ಥನೆ

■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಪಟ್ಟಣದಲ್ಲಿ ಹಾಗೂ ತಾಲೂಕಿನ ವಿವಿಧ ಗ್ರಾಮಗಳಲ್ಲಿ ರಂಜಾನ್ ಹಬ್ಬವನ್ನು ಮುಸ್ಲಿಂ ಬಾಂಧವರು ಸಡಗರ ಸಂಭ್ರಮದಿಂದ ಆಚರಿಸಿದರು. ಪವಿತ್ರ ಉಪವಾಸ ತಿಂಗಳು ಪೂರ್ಣಗೊಂಡ ಹಿನ್ನೆಲೆ, ಬೆಳಿಗ್ಗೆ ಪಟ್ಟಣದ ಈದ್ಗಾ ಮೈದಾನ ಹಾಗೂ ಮಸೀದಿಗಳಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಸೇರಿ ವಿಶೇಷ ಈದ್-ಉಲ್-ಫಿತ್ರ್ ನಮಾಜ್ ಸಲ್ಲಿಸಿದರು.

ಈ ಸಂದರ್ಭದಲ್ಲಿ ಹಿರಿಯರು, ಯುವಕರು ಹಾಗೂ ಮಕ್ಕಳು ಹೊಸ ವಸ್ತ್ರಧಾರಣೆಯೊಂದಿಗೆ ಭಾಗವಹಿಸಿ ಪರಸ್ಪರ "ಈದ್ ಮುಬಾರಕ್" ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಸಮಾಜದಲ್ಲಿ ಶಾಂತಿ, ಸಹೋದರತ್ವ ಹಾಗೂ ಏಕತೆಯ ಸಂದೇಶವನ್ನು ಸಾರುವಂತೆ ಧಾರ್ಮಿಕ ಮುಖಂಡರು ಕರೆ ನೀಡಿದರು. ಹಬ್ಬದ ಅಂಗವಾಗಿ ಬಡವರಿಗೆ ಆಹಾರ ದಾನಧರ್ಮ ಕಾರ್ಯಕ್ರಮಗಳು ನಡೆಯಿತು. ವಿವಿಧ ಕಡೆಯಿಂದ ಸಿಹಿ ತಿಂಡಿಗಳನ್ನು



ಹಂಚಿಕೊಂಡು ಹಬ್ಬದ ಸಂತೋಷವನ್ನು ಎಲ್ಲರೂ ಹಂಚಿಕೊಂಡರು. ಒಟ್ಟಿನಲ್ಲಿ ಹಗರಿಬೊಮ್ಮನಹಳ್ಳಿ ಪಟ್ಟಣ ಹಾಗೂ ತಾಲೂಕಿನ ಗ್ರಾಮಗಳಲ್ಲಿ ರಂಜಾನ್ ಹಬ್ಬದ ಸಂಭ್ರಮ ಕಂಗೊಳಿಸಿತು.

ಈ ಸಂದರ್ಭದಲ್ಲಿ ಡಿ.ವೈ.ಎಸ್.ಪಿ ಮಲ್ಲೇಶ್ ನಾಯ್ಕ ದೊಡಮನಿ, ಸಿಪಿಐ ವಿಕಾಸ್ ಲಮಾಣಿ, ಪಿ.ಎಸ್.ಐ ಬಸವರಾಜ್ ಅಡವಿಬಾವಿ ಸೇರಿದಂತೆ ಪೊಲೀಸರು ಉಪಸ್ಥಿತರಿದ್ದರು. ಪುರಸಭೆಯ ನೈರ್ಮಲ್ಯ ಮೇಸ್ತ್ರಿ ವೀರಣ್ಣ ಅವರನ್ನು ಮುಸ್ಲಿಂ ಬಾಂಧವರು ಸನ್ಮಾನಿಸಿದರು. ರಂಜಾನ್ ಹಬ್ಬದಲ್ಲಿ ಸಹಸ್ರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು.

# ನರೇಗಲ್ಲದಲ್ಲಿ ಸಂಭ್ರಮದ ರಂಜಾನ್ ಆಚರಣೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನರೇಗಲ್ಲ ಪಟ್ಟಣ ಸೇರಿದಂತೆ ಹೋಬಳಿಯಾದ್ಯಂತ ಶನಿವಾರ ಶ್ರದ್ಧಾಭಕ್ತಿ ಮತ್ತು ಸಂಭ್ರಮದೊಂದಿಗೆ ಮುಸ್ಲಿಂ ಬಾಂಧವರು ಪವಿತ್ರ ಹಬ್ಬ ಈದ್ ಉಲ್ ಫಿತ್ರ್ (ರಂಜಾನ್) ಅನ್ನು ವಿಜೃಂಭಣೆಯಿಂದ ಆಚರಿಸಿದರು. ನರೇಗಲ್ಲ, ಅಬ್ಬಿಗೇರಿ, ಯರೇಬೇಲೇರಿ, ಕುರುಡಗಿ, ಡಿ.ಎಸ್. ಹಡಗಲಿ, ನಿಡಗುಂದಿ, ಜಕ್ಕಲಿ, ಮಾರನಬಸರಿ, ಗುಜಮಾಗಡಿ, ಹೊಸಳ್ಳಿ, ಹಾಲಕೇರಿ, ಕೋಚಲಾಪೂರ ಸೇರಿದಂತೆ ಹೋಬಳಿಯಾದ್ಯಂತ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಮುಸ್ಲಿಂ ಬಾಂಧವರು ಹಿಂದು ಸ್ನೇಹಿತರನ್ನು ತಮ್ಮ ಮನೆಗಳಿಗೆ ಆಹ್ವಾನಿಸಿ, ರಂಜಾನ್ ವಿಶೇಷವಾದ ಸೂರ್‌ಖುರ್ಮಾ ನೀಡಿ ಆತಿಥ್ಯ ನೀಡುವ ಮೂಲಕ ಸೌಹಾರ್ದತೆ ಮತ್ತು ಭ್ರಾತೃತ್ವ ಮೆರೆದರು.

ಪಟ್ಟಣದ ಗದಗ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಸೇರಿ ಸಾಮೂಹಿಕ ನಮಾಜ್ ಸಲ್ಲಿಸಿದರು. ಈ ಸಂದರ್ಭದಲ್ಲಿ ಚಿಕ್ಕಮಕ್ಕಳು ಸಹ ಭಾಗವಹಿಸಿದ್ದು ಗಮನಸೆಳೆದಿತು. ಈದ್ಗಾದಲ್ಲಿ ವಿಶೇಷ ಪ್ರಾರ್ಥನೆ ಬಳಿಕ ಪರಸ್ಪರ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಹಿರಿಯರು, ಯುವಕರು ಹಾಗೂ ಮಕ್ಕಳು ಎಲ್ಲರೂ ಹರ್ಷಭರಿತವಾಗಿ ಶುಭಾಶಯ ಹಂಚಿಕೊಂಡರು.

ಮಸೀದಿ ಮತ್ತು ಈದ್ಗಾಗಳಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಮುಸ್ಲಿಂ ಬಾಂಧವರು ತಮ್ಮ ಶಕ್ತಿಗನುಸಾರ ದಾನ ಧರ್ಮಗಳಲ್ಲಿ ತೊಡಗಿ-ಕೊಂಡರು. ವಿಶೇಷವಾಗಿ ಹಿರಿಯರು ಮಕ್ಕಳಿಗೂ ಹಣ ನೀಡಿ ದಾನ ಮಾಡುವ ಮಹತ್ವವನ್ನು ತಿಳಿಸಿ, ಮಾನವೀಯ ಮೌಲ್ಯಗಳನ್ನು ಬೆಳೆಸಿದರು.

# ಸಂಭ್ರಮದ ಈದ್ ಮಿಲಾದ್ ಆಚರಣೆ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪ್ರವಾದಿ ಮಹಮ್ಮದ್ ಪೈಗಂಬರರ ಜನ್ಮದಿನಾಚರಣೆ ಅಂಗವಾಗಿ ಮುಸ್ಲಿಂ ಬಾಂಧವರು ರಮಜಾನ್ ಹಬ್ಬವನ್ನು ಶನಿವಾರ ಸಡಗರ ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ಹೊರವಲಯದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ಜನಾಬ ಇಸ್ಮಾಯಿಲ್ ಖಾಜಿ ಬೋಧಿಸಿದರು. ನಂತರ ಮುಸ್ಲಿಂ ಬಾಂಧವರು ಒಬ್ಬರನ್ನೊಬ್ಬರು ಅಪ್ಪಿಕೊಂಡು ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಮಕ್ಕಳು ಸೇರಿದಂತೆ ವೃದ್ಧರು, ಯುವಕರು ಹಾಗೂ ಹಿರಿಯರು ಹೊಸ ಬಟ್ಟೆಗಳನ್ನು ಧರಿಸಿಕೊಂಡು ಸಡಗರ ಸಂಭ್ರಮದಿಂದ ಹಬ್ಬವನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ್, ಹಸನಸಾಬ ಶೇಖ್, ಮನ್ಸೂರ್ ಹಣಗಿ, ರಿಯಾಜ್ ಮೋಮಿನ್, ತಾಜುದ್ದೀನ್ ಕಿಂಡ್ರಿ, ಎ.ಡಿ. ಮುಜಾವಾರ, ಹೈದರ ಖವಾಸ್, ರಸೂಲ್ ಸಾಬ್ ಚಿಂಚಲಿ, ಖಾಸಿಂಸಾಬ ಹಾದಿಮನಿ, ಇಸ್ಮಾಯಿಲ್ ಮುಜಾವರ, ಇಮಾಮ್ ಜಾಪರ್ ಮುಲ್ಲಾ, ಲಾಲಶಾಪೀರ್ ಮಖಾಂದಾರ, ಖಲಂದರ್ ಗಾಡಿ, ಮಹಮ್ಮದ್ ಗಾಡಿ, ಆಸ್ಫಾಕ್ ನದ್ದಿಮುಲ್ಲಾ, ಇಮಾಮಸಾಬ ಖವಾಸ್, ಎಚ್. ಎಂ. ನದ್ದಿಮುಲ್ಲಾ, ದಾವಲಸಾಬ ಕುರ್ತಕೋಟಿ, ಮೆಹಬೂಬಸಾಬ ಲಾಡಸಾಬ, ಮಾಬುಲಿ ದುರ್ಗಿಗುಡಿ, ದಾವುದ್ ಜಮಾಲಸಾಬ, ಗುಡುಸಾಬ ಶಿರೂರ ಹಾಗೂ ಇಸ್ಮಾಯಿಲ್ ಖಾಗದ ಉಪಸ್ಥಿತರಿದ್ದರು.



## ಮಾರನಬಸರಿ ಗ್ರಾಮದ ಈದ್ಗಾ ಮೈದಾನದಲ್ಲಿ ರಂಜಾನ್ ಸಾಮೂಹಿಕ ನಮಾಜ್

# ಇಸ್ಲಾಂ ಧರ್ಮ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದೆ



■ ವಿಜಯಸಾಕ್ಷಿ ಸುದ್ದಿ, ರೋಣ

ಮಾರನಬಸರಿ ಗ್ರಾಮದ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಸಾಮೂಹಿಕ ನಮಾಜ್ ಭಕ್ತಿಪೂರ್ವಕವಾಗಿ ನೆರವೇರಿತು.

ಈ ಸಂದರ್ಭದಲ್ಲಿ ನಮಾಜ್‌ಗೆ ನೇತೃತ್ವ ವಹಿಸಿ ಮಾತನಾಡಿದ ಮೌಲಾನ ಮಲೀಕ್, ಮುಸ್ಲಿಂರು ತಮ್ಮ ಮಕ್ಕಳಿಗೆ ಧಾರ್ಮಿಕ ಜ್ಞಾನ ಜೊತೆಗೆ ಉತ್ತಮ ಶಿಕ್ಷಣ ಒದಗಿಸುವುದು ಪೋಷಕರ ಮುಖ್ಯ ಕರ್ತವ್ಯ ಎಂದು ಹೇಳಿದರು.

ರಂಜಾನ್ ಹಬ್ಬವು ಮುಸ್ಲಿಂರ ಪಾಲಿಗೆ ಅತ್ಯಂತ ಪವಿತ್ರವಾದ ಹಬ್ಬವಾಗಿದ್ದು, ಈ ತಿಂಗಳಲ್ಲಿ ಉಪವಾಸ, ಪ್ರಾರ್ಥನೆ ಹಾಗೂ ಆತ್ಮಶುದ್ಧಿಗೆ ವಿಶೇಷ ಮಹತ್ವವಿದೆ. ರಂಜಾನ್‌ನ ತತ್ವವು ಕೆಟ್ಟ ಆಲೋಚನೆಗಳನ್ನು ತೊಡೆದು ಹಾಕಿ, ಸತ್ಮಾರ್ಗದಲ್ಲಿ ಬದುಕಲು ಮಾರ್ಗದರ್ಶನ ನೀಡುತ್ತದೆ ಎಂದರು.

ದಾನ ಧರ್ಮಕ್ಕೆ ಇಸ್ಲಾಂನಲ್ಲಿ ವಿಶೇಷ ಸ್ಥಾನವಿದ್ದು, ಸಮರ್ಥರು ಬಡವರಿಗೆ ನೆರವಾಗಬೇಕು. ಸಹೋದರತೆ, ಏಕತೆ ಹಾಗೂ ಸತ್ಯನಿಷ್ಠೆಯಿಂದ ಜೀವನ ನಡೆಸುವುದು ಪ್ರತಿಯೊಬ್ಬ ಮುಸ್ಲಿಂನ ಕರ್ತವ್ಯ ಎಂದು ಅವರು ತಿಳಿಸಿದರು.

ಇಸ್ಲಾಂ ಧರ್ಮವು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿರುವುದರಿಂದ, ಪೋಷಕರು ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಧಾರ್ಮಿಕ ಜ್ಞಾನ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಹೆತ್ತವರನ್ನು ಗೌರವಿಸುವುದು ಮಕ್ಕಳ ಪ್ರಮುಖ ಗುಣವಾಗಿರಬೇಕು ಎಂದು ಹೇಳಿದರು.

ಇದಕ್ಕೂ ಮೊದಲು ನೂರಾರು ಮುಸ್ಲಿಂ ಭಕ್ತರು ದೇವರ ನಾಮಸ್ಮರಣೆಯೊಂದಿಗೆ ಈದ್ಗಾ ಮೈದಾನಕ್ಕೆ ಆಗಮಿಸಿದ್ದರು. ರೋಣ ತಾಲೂಕು ಸೇರಿದಂತೆ ನಿಡಗುಂದಿ, ಜಕ್ಕಲಿ, ಅಬ್ಬಿಗೇರಿ, ಹಿರೇಹಾಳ, ಕೋತಬಾಳ, ಇಟಗಿ, ಸವಡಿ, ಬೆಳವಣಕಿ, ಮುಗಳಿ, ಗುಳಗುಳಿ, ಹೊಸಳ್ಳಿ, ಕಳಕಾಪೂರ ಸೇರಿದಂತೆ ಹಲವು ಗ್ರಾಮಗಳಲ್ಲಿ ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕಾಶೀಮಸಾಬ ದೋಟಿಹಾಳ, ರೈಮಾನಸಾಬ ಮೋತೆಖಾನ್, ಫಕ್ರುಸಾಬ ಹಜರತನವರ, ಬಾಬು ಮೋತೆಖಾನ್, ಬಾಬು ಅತ್ತಾರ, ಮರ್ತುಜಸಾಬ ಸವಡಿ, ಅಲ್ಲಿಸಾಬ ಸವಡಿ, ಖಾದಿರಸಾಬ ಕಳಕಾಪೂರ, ನಬಿಸಾಬ ಹುಡೇದ, ಮೌಲಾಸಾಬ ಸವಡಿ ಸೇರಿದಂತೆ ಮುಸ್ಲಿಂ ಸಮಾಜದ ಮುಖಂಡರು ಮತ್ತು ಸದಸ್ಯರು ಉಪಸ್ಥಿತರಿದ್ದರು.

## ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಕೋರಿದ ಸಿಎಂ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಕೋರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾನವಕುಲದ ಒಳಿತಿಗೆ ಪ್ರಾರ್ಥಿಸುವುದು ಅತ್ಯಂತ ಅವಶ್ಯ ಎಂದು ತಿಳಿಸಿದರು.

ಅವರು ಶನಿವಾರ ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಾತನಾಡಿದರು.

# ಡಂಬಳ ಹೋಬಳಿಯಲ್ಲಿ ಸಡಗರ-ಸಂಭ್ರಮದಿಂದ ಈದ್ ಉಲ್ ಫಿತ್ರ್ ಆಚರಣೆ



■ ವಿಜಯಸಾಕ್ಷಿ ಸುದ್ದಿ, ಡಂಬಳ

ಪವಿತ್ರ ರಮಜಾನ್ ವ್ರತಗಳನ್ನು ಪೂರ್ಣಗೊಳಿಸಿದ ಡಂಬಳ ಹೋಬಳಿಯ ಮುಸ್ಲಿಮರು ಶನಿವಾರ ಈದ್ ಉಲ್ ಫಿತ್ರ್ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಿದರು.

ಡಂಬಳ ಗ್ರಾಮದ ಮುಸ್ಲಿಂ ಸಮುದಾಯದ ಧರ್ಮಗುರು ಖಾದರಸಾಬ ಮುಲ್ಲಾ ಅವರ ನೇತೃತ್ವದಲ್ಲಿ ಜುಮ್ಮಾ ಮಸೀದಿ ಹಾಗೂ ಈದ್ಗಾಗಳಲ್ಲಿ ಸಾಮೂಹಿಕ ನಮಾಜ್ ನೆರವೇರಿಸಲಾಯಿತು.

ಈದ್ ನಮಾಜ್ ಬಳಿಕ ಮಾತನಾಡಿದ ಅವರು, ಎಲ್ಲರೂ ಸಹೋದರತ್ವದಿಂದ ಬದುಕಿ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಬೆಳೆಸುವಂತೆ ಸಂದೇಶ ನೀಡಿದರು. ದೇಶದಲ್ಲಿ ಉತ್ತಮ ಮಳೆ-ಬೆಳೆ ಆಗಲಿ, ಆರ್ಥಿಕ ಪ್ರಗತಿ ಹೆಚ್ಚಲಿ ಹಾಗೂ ಬಡವರು, ಕಾರ್ಮಿಕರು, ರೈತರು, ಉದ್ಯೋಗಿಗಳಿಗೆ ಆರೋಗ್ಯ-ಸಂಪತ್ತು ಲಭಿಸಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿದರು.

ಹೋಬಳಿಯ ವಿವಿಧ ಜುಮ್ಮಾ ಮಸೀದಿ ಮತ್ತು ಈದ್ಗಾಗಳಲ್ಲಿ ಈದ್ ಖುತ್ಬಾ, ಪ್ರವಚನ, ಶುಭಾಶಯ ವಿನಿಮಯ ಕಾರ್ಯಕ್ರಮಗಳು ನಡೆದವು. ನಮಾಜ್ ನಂತರ ಮುಸ್ಲಿಮರು ತಮ್ಮ ಪೂರ್ವಜರ ಸಮಾಧಿಗಳಿಗೆ ಭೇಟಿ ನೀಡಿ, ಅಗಲಿದವರ ಆತ್ಮಶಾಂತಿಗಾಗಿ ಪ್ರಾರ್ಥಿಸಿದರು. ಬಳಿಕ ಬಂಧು-ಬಳಗ ಹಾಗೂ ನೆರೆಹೊರೆಯವರ ಮನೆಗಳಿಗೆ ಭೇಟಿ ನೀಡಿ ಹಬ್ಬದ ಶುಭಾಶಯ ಕೋರಿದರು.

ಡೋಣಿ, ಹಿರೇವಡ್ಡಟ್ಟಿ, ಮೇವುಂಡಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ವಿಶೇಷ ನಮಾಜ್ ನಂತರ ಪರಸ್ಪರ ಹಸ್ತಲಾಘವ ಹಾಗೂ ಆಲಿಂಗನದ ಮೂಲಕ ಹಬ್ಬದ ಸಂಭ್ರಮ ಮೆರೆದರು. ಸಣ್ಣ ಮಕ್ಕಳಿಂದ ಹಿರಿಯರ ತನಕ ಹೊಸ ಬಟ್ಟೆ ಧರಿಸಿ, ಅತ್ತರ ಹಚ್ಚಿಕೊಂಡು, ವಿವಿಧ ರೀತಿಯ ಸಿಹಿ-ತಿನಿಸುಗಳನ್ನು ಸವಿದು ಹಬ್ಬವನ್ನು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷ ಬಶೀರ ಅಹ್ಮದ ತಾಂಬೋಟಿ, ಅಂಜುಮನ್ ಯುವ ಮುಖಂಡ ಖಾಜಾಹುಸೇನ ಹೊಸಪೇಟಿ, ಮಹಮ್ಮದರಫೀಕ ಮನಿಯಾರ, ರಜಾಕಸಾಬ ತಾಂಬೋಟಿ, ಮಹಮ್ಮದರಫೀಕ ಹೊಸಪೇಟಿ ಸೇರಿದಂತೆ ಹಲವಾರು ಗಣ್ಯರು, ಹಿರಿಯರು ಹಾಗೂ ಯುವಕರು ಉಪಸ್ಥಿತರಿದ್ದರು.

# ಲಕ್ಷ್ಮೇಶ್ವರದಲ್ಲಿ ಸಂಭ್ರಮದ ಈದ್-ಉಲ್-ಫಿತರ್ ಆಚರಣೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮುಸ್ಲಿಂ ಬಾಂಧವರ ಶ್ರದ್ಧಾ-ಭಕ್ತಿಯ ಪವಿತ್ರ ಹಬ್ಬವಾಗಿರುವ ರಂಜಾನ್ ಮಾಸಾಂತ್ಯದ ಅಂಗವಾಗಿ ಶನಿವಾರ ಪಟ್ಟಣದಲ್ಲಿ ಈದ್-ಉಲ್-ಫಿತರ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಪಟ್ಟಣದ ಮುಕ್ತಿಮಂದಿರ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಂಧುಗಳು ಸೇರಿ ಸಾಮೂಹಿಕ ನಮಾಜ್ ಸಲ್ಲಿಸಿದರು.

ಈದ್-ಉಲ್-ಫಿತರ್ ಎಂಬ ಹೆಸರಿನಿಂದ ಕರೆಯಲ್ಪಡುವ ರಂಜಾನ್ ಹಬ್ಬವು ಮುಸ್ಲಿಮರ ಪ್ರಮುಖ ಪವಿತ್ರ ಹಬ್ಬಗಳಲ್ಲಿ ಒಂದಾಗಿದ್ದು, ಒಂದು ತಿಂಗಳ ಕಾಲ ಆಚರಿಸಲಾದ ರೋಜಾ ವೃತದ ಸಮಾಪ್ತಿಯನ್ನು ಸೂಚಿಸುತ್ತದೆ. ಬೆಳಗ್ಗೆ ಹೊಸ ಬಟ್ಟೆಗಳನ್ನು ಧರಿಸಿ ಈದ್ಗಾ ಮೈದಾನಕ್ಕೆ ಆಗಮಿಸಿದ ಜನರು, ಧರ್ಮಗುರುಗಳ ನೇತೃತ್ವದಲ್ಲಿ ನಡೆದ ಪ್ರಾರ್ಥನೆಯಲ್ಲಿ ಭಾಗವಹಿಸಿ ಅಲ್ಲಾಹನನ್ನು ಸ್ಮರಿಸಿದರು.

ಪ್ರಾರ್ಥನೆ ಬಳಿಕ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡು ಸೌಹಾರ್ದತೆಯನ್ನು ವ್ಯಕ್ತಪಡಿಸಿದರು. ಹಿರಿಯರು, ಯುವಕರು ಹಾಗೂ ನೂರಾರು ಮಕ್ಕಳು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಹಬ್ಬದ ಸಂಭ್ರಮವನ್ನು ಹೆಚ್ಚಿಸಿದರು.

ಈದ್ ಹಬ್ಬದ ಅಂಗವಾಗಿ ಮನೆಗಳಲ್ಲಿ ವಿಶೇಷ ಸಿಹಿ ಪದಾರ್ಥಗಳಾದ ಸುರಕುಂಬ ತಯಾರಿಸಿ ಕುಟುಂಬದವರೊಂದಿಗೆ ಭೋಜನ ಮಾಡಲಾಯಿತು. ಅಲ್ಲದೆ ಬಡವರಿಗೆ ದಾನ-ಧರ್ಮ ಮಾಡುವುದು ಈ ಹಬ್ಬದ ಪ್ರಮುಖ ಅಂಶವಾಗಿದ್ದು, ಹಲವರು ದಾನ ಕಾರ್ಯಗಳಲ್ಲಿ ತೊಡಗಿಸಿಕೊಂಡರು.

ಪಟ್ಟಣದಲ್ಲಿ ರಂಜಾನ್ ಹಬ್ಬವು ಶಾಂತಿಯುತವಾಗಿ ನೆರವೇರಿತು. ಅಂಜುಮನ್-ಎ-ಇಸ್ಲಾಂ ಸಮಿತಿ, ದೂದನಾನಾ ದರ್ಗಾ ಸಮಿತಿ ಸೇರಿದಂತೆ ಮುಸ್ಲಿಂ ಸಮಾಜದ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಮುಖಂಡರು ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.



**Form - IV**
**(See rule 8)**
Statement Showing the Ownership of
**VIJAYA SAKSHI** KANNADA DAILY NEWS PAPER
1) Place of publication : GADAG
Printed at Sai Printing Press and publishers, H.No. 130/154, Balaji Nagar, Gadag. Published at **Vijaya Sakshi,** Near Ring Road, Gadag-582103 Dist: Gadag (Karnataka)
2) Periodicitiy of publication: Daily Morning (Kannada)
3) Printer's Name : **Hussainsab M. Shareefanavar**
(Whether citizen of india)
YES
Address : H.No. 130/154, Balaji Nagar, Near Ring Road, Gadag-582103 Dist: Gadag (Karnataka)
4) Publisher's Name : **Hussainsab M. Shareefanavar**
(Whether citizen of india)
YES
Address : H.No. 130/154, Balaji Nagar, Near Ring Road, Gadag-582103 Dist: Gadag (Karnataka)
5) Editor's Name :**Hussainsab M. Shareefanavar**
(Whether citizen of india)
YES
Address : H.No. 130/154, Balaji Nagar, Near Ring Road, Gadag-582103 Dist: Gadag (Karnataka)
6) Name and address of :**Hussainsab M. Shareefanavar** individual who own the newspaper or printers or in individual Capacity shareholder holding more (Sole Proprietor) than one percent of the H.No. 130/154, Balaji Nagar, Near Ring Road, Gadag-582103 Dist: Gadag (Karnataka)
I **Hussainsab M. Shareefanavar** hereby declare that the particulars given above are true to the best of my knowledge and belief.
Date : 21-03-2026
Place : Gadag
**Hussainsab M. Shareefanavar**
Signature of the Publisher

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka